Reg. No. M. 1550

KODAGU

25–10–1935

IF NOT

delivered

please return to

"KODAGU"
OFFICE,
MERCARA.

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕೆಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

—೦—

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಸತ್ಯೇನ ಭೂತದಯಯೇವಾ ನಿದ್ಯಾ ವೀರೆ ಪ್ರಯತ್ನತಾಃ॥ ಐಕ್ಯಮತ್ಯೇನ ಜೀಕಾವಾಂ ಸುಸ್ಥಿರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೨೫ನೇ ಶುಕ್ರವಾರ. [ಸಂಚಿಕೆ ೭೫

By Appointment
To H. E. The Governor of Madras.

CUPS AND MEDALS.



Telephone;
3145

Telegrams:
'PRECIOUS.'



V. SUBRAMANIA IYER.
Jeweller, & Diamond Merchant,
52–49 2 & 3 Kuppumuthu Street Tiruvateswaranpet. MADRAS. POST BOX 423 TRIPLICANE.
Catalogue & special designs with quotations (free) on enqu ry

1906 ನೇ ಇಸವಿಯಲ್ಲಿ ಸ್ಥಾಪಿತವಾದ

ದಿ ಕೆನರಾ ಬ್ಯಾಂಕಿಂಗ್ ಕೊಪರ್ರೇಶನ್ ಉಡುಪಿ ಲಿಮಿಟೆಡ್.

ನೋಟೀಸು.

ನಮ್ಮ ಅಸಂಖ್ಯಾತ ಗಿರಾಕಿಗಳಿಗೆ ಈಗಿನ ಸ್ಥಿತಿಗಿಂತಲೂ ಹೆಚ್ಚಿನ ಅನುಕೂಲತೆಗಳನ್ನು ಕೊಡುವ ಉದ್ದಿಶ್ಯ, ನಮ್ಮ ವೀರರಾಜೇಂದ್ರಪೇಟೆ ಆಫೀಸನ್ನು ಈಗಿರುವ ಕಟ್ಟಡದಿಂದ ಇದೇ ಅಕ್ಟೋಬರ ತಾ 25 ನೇ ಶುಕ್ರವಾರ ದಿನ ಕಾಡಾಚರ ಮೋಟರ್ ಸರ್ವಿಸ್ ಏಜಂಟರಾದ ಮೆಸರ್ಸ್ ಕೋಲಾ ಮೊಹಿದಿನ್ ಸಾಹೇಬ ಎಂಡ್ ಸನ್ಸ್‌ರವರ ದೊಡ್ಡ ಮತ್ತು ಊರಿನ ಮಧ್ಯ ಸ್ಥಳವಾಗಿರುವ ಮಹಡಿಯ ಕಟ್ಟಡಕ್ಕೆ ಸಾಗಿಸುತ್ತೇವೆ. ಹೊಸ ಆಫೀಸಿನಲ್ಲಿ ತಾ. 28 ರಿಂದ ದೈನಿಕ ಕೆಲಸಗಳನ್ನು ಪ್ರಾರಂಭಿಸುತ್ತೇವೆ.

NOTICE.

We beg to announce that our **Virarajendrapet** office will be shifted from the present premises to the building of Messrs. Kola Moidin Saheb & Sons, Agents Kadachar Motor Service, Virajpet, on Friday the 25th instant, where regular bussiness will be transacted with effect from 28—10—1935.

Udipi, M. Srinivasa Prabhu,
29—7—1935. 52—50 Manager,

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.
ಉದಾರವಾದ ಕ್ಷೆಟ್ಟಿ ಭೂಕಂಪ ಸೌಲಭ್ಯಗಳು.

(1) ಆರು ತಿಂಗಳುಗಳವರೆಗೆ ಪ್ರೀಮಿಯಂ ಇಲ್ಲದೆ ಪಾಲಸಿಗಳು ಜಾರಿಯಲ್ಲಿರುವವು.
(2) ಕ್ಲೇಮ್ಸುಗಳು ಮತ್ತು ಪಾವತಿಯು ಅತೀ ವಿನಯ ಮತ್ತು ಕ್ಷಿಪ್ರವಾಗಿ ಮಾಡಲ್ಪಡುವುದು.
(3) ಸಾಲಗಳಮೇಲಿನ ಬಡ್ಡಿಯ ದರವು 4½% ಗೆ ಇಳಿಸಲ್ಪಟ್ಟಿದೆ.
(4) ಪುನಃ ಜಾರಿಗೆ ತರುವ ಶರತ್ತುಗಳು ಸುಲಭ ರೀತಿಯಲ್ಲಿವೆ.

ಜಾರಿಯಲ್ಲಿರುವ ವಿಮೆಮೊಬಲಗು (ಹೆಚ್ಚು) 265 ಲಕ್ಷ
ಲೇವಾದೇವಿಯಲ್ಲಿರುವಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ಎಮೂ ಹಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ
ಜೀವಾವಧಿ ಪಾಲಿಸಿಗಳಿಗೆ ಸಾಲಿಯಾನರೂ. 25%o
ಎಂಡೋಮೆಂಟ್ ಪಾಲ್ಸಿಗಳಿಗೆ ಸಾಲಿಯಾನ ರೂ. 20%o

ಏಜೆನ್ಸಿಯ ನಿಯಮಗಳು ವಿಶೇಷ ಲಾಭದಾಯಕ.
ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ. ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ ಪಿ. ಎಸ್ ಅಯ್ಯಂಗಾರ್
ಸುಪರಿಂಟಿಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ
52—21 ಬೆಂಗಳೂರು ಸಿಟಿ

ವಿವಿಧ ವಾರ್ತೆಗಳು.

ಎಲ್ಲಿಗೋ ಯಾರಿಗೂ ತಿಳಿಯದು!

ಹಿಂದೂಸ್ಥಾನದಿಂದ ಮುಂದಿನ ಡಿಸೆಂಬರದಲ್ಲಿ ಸುಡಾನಿಗೆ ಹೋಗತಕ್ಕ ಎಸೆಕ್ಸ್ ರೆಜಿಮೆಂಟು ತಾ 15 ರಲ್ಲಿ ಒಮ್ಮಿಂದೊಮ್ಮೆ 'ನೇವಾಸಾ' ಎಂಬ ಸೈನಿಕ ಹಡಗದಿಂದ ಎಲ್ಲಿಗೋ ಹೊರಟು ಹೋಯಿತು.

—೦೦೦—

'ಬೊಂಬಾಯಿ ಸ್ಪೆಷ್ಮಲ್ ಪವರ್ಸ್‌ಬಿಲ್' ಪಾಸಾಯಿತು.

ಬೊಂಬಾಯಿ ಕೌನ್ಸಿಲಿನಲ್ಲಿ 'ಬೊಂಬಿ ಸ್ಪೆಷಲ್ ಪವರ್ಸ್ ಎಕ್ಟ್ 1932' ಪಾಸಾಯಿತು. ಓಟಿನ ಸಮಯದಲ್ಲಿ 22 ಮಂದಿ ಸದಸ್ಯರು ಎದ್ದು ಹೊರಗೆ ಹೋಗಿಬಿಟ್ಟರು. ಉಳಿದವರಲ್ಲಿ 49 ಮಂದಿ ಪರವಾಗಿಯೂ 4 ಮಂದಿ ವಿರೋಧವಾಗಿಯೂ ಮತಕೊಟ್ಟದ್ದರಿಂದ 'ಬಿಲ್' ಪಾಸಾಯಿತು.

—೦೦೦—

ಸಿಪಾಯಿಗಳ ಅತ್ಯಾಚಾರಕ್ಕೆ ಶಿಕ್ಷೆ

ಭೆಂಡಾ ಕೇಸಿನ ತೀರ್ಪು.

ಜಬಲ್‌ಪುರದಲ್ಲಿ ಕಿಂಗ್ಸ್ ರಿಜಿಮೆಂಟಿನ ಬಿಳಿ ಸಿಪಾಯಿಗಳು ಕೆಲ ದಿನ ಹಿಂದೆ ಗ್ರಾಮವಾಸಿಗಳ ಮೇಲೆ ಧಾಳಿ ಗೈದುದರ ಪರಿಣಾಮವಾಗಿ ಒಬ್ಬನು ಮೃತಪಟ್ಟು, 13 ಮಂದಿ ಗಾಯಗೊಂಡದರ ಮೇಲೆ 10 ಮಂದಿಯ ಮೇಲೆ ಕಟ್ಟಿ ನಡಿಸಿತಾ. 19ರಲ್ಲಿ ಅವರೆಲ್ಲರಿಗೂ 20 ವರ್ಷದಿಂದ 1½ ವರ್ಷಗಳ ವರೆಗೆ ಕಠಿಣ ಸಜೆ ವಿಧಿಸಲಾಯಿತು.

—೦೦೦—

ಬ್ರಿಟನಿನ ಪಾರ್ಲಿಮೆಂಟು ಚುನಾವಣೆ.

ಈ ತಿಂಗಳು 22ನೇ ತಾರೀಕಿನಲ್ಲಿ ಈಗಿನ ಬ್ರಿಟಿಷ್ ಪಾರ್ಲಿಮೆಂಟ್ 4 ದಿನಗಳ ವರೆಗೆ ಸೇರುವದು. ಈ ಅಧಿವೇಶನವಾದ ನಂತರ ಈಗಿನ ಪಾರ್ಲಿಮೆಂಟ್ ರದ್ದಾಗಿ ಮುಂದಿನ ಹೊಸ ಚುನಾವಣೆಯು ನವಂಬರು ತಾ. 14ರಲ್ಲಿ ನಡೆಯುವುದು. ಎಲ್ಲ ಪಕ್ಷದವರೂ ತಮ್ಮ ತಮ್ಮ ಸದಸ್ಯರನ್ನು ಚುನಾವಣೆಗೆ ನಿಲ್ಲಿಸುವ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ನವಂಬರು 4ರಲ್ಲಿ ನಾಮಿನೇಶನ್ ಪತ್ರಗಳು ಕೊಡಲ್ಪಟ್ಟು, ತಾ. 14ರಲ್ಲಿ ಓಟುಗಳು ತೆಗೆಯಲ್ಪಡುವವು

—೦೦೦—

ವೇಲ್ಸಿನಲ್ಲಿ ಸತ್ಯಾಗ್ರಹ.

ಸೌತ್ ವೇಲ್ಸಿನ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಸತ್ಯಾಗ್ರಹವು ಸುರುವಾಗಿದೆ. ಸುಮಾರು 150 ಜನ ಕೂಲಿಕಾರರು ಗಣಿಯಲ್ಲಿಯೇ ಇದ್ದುಕೊಂಡು ಅನ್ನತ್ಯಾಗ ಮಾಡಿ ಸತ್ಯಾಗ್ರಹ ನಡಿಸಿರುವರು. ಗಣಿಯ ಮೂಲೀಕರು 88 ಮಂದಿ ಹೊರಗಿನ ಕೂಲಿಕಾರರನ್ನು ಕೆಲಸಕ್ಕೆ ಹಚ್ಚಿದ್ದೇ ಇದಕ್ಕೆ ಕಾರಣವಾಗಿದೆ. ಅವರನ್ನು ಕಡಿಮೆ ಮಾಡುವ ವರೆಗೆ ಈ ಸತ್ಯಾಗ್ರಹವು ನಡೆಯುವದು. ಅವರ ಅಪ್ತೇಷ್ಟರು ಅವರ ಹತ್ತಿರವೇ ಇದ್ದುಕೊಂಡು ಅವರನ್ನು ಪ್ರೋತ್ಸಾಹಿಸುತ್ತಿರುವರು.

—೦೦೦—

ಮೆಮೆಲ್ ಚುನಾವಣೆಯಲ್ಲಿ ಜರ್ಮನಿಗೆ ಜಯ.

ಮೆಮೆಲ್ ಪ್ರಾಂತವು ಮೊದಲು ಜರ್ಮನಿಗೆ ಸೇರಿದ್ದು ಮಹಾ ಯುದ್ಧದನಂತರ 1918ರಲ್ಲಿನ ಒಪ್ಪಂದದ ಪ್ರಕಾರ ಲುಥೀನಿಯಾಕ್ಕೆ ಬಿಡಲಾಯಿತು. ಅಲ್ಲಿ ಈಗ ಒಂದು ಮಿಲ್ಲಿಯಕ್ಕಿಂತ ಅಧಿಕ ಜರ್ಮನಿಯವರಿರುವರು. ಅಲ್ಲಿನ 26 ಪ್ರತಿನಿಧಿಗಳ ಸ್ಥಾನಗಳಲ್ಲಿ 24 ಸ್ಥಾನಗಳು ಜರ್ಮನಿಯವಕ್ಕೆ ವಶವಾಗಿದೆಯಂತೆ. ಕಳೆದ ಸಾರಿ 'ಸ್ಸಾರ್' ಪ್ರಾಂತ್ಯವು ಜರ್ಮನಿಗೆ ಸೇರಿತು. ಈಗ ಮೆಮೆಲ್ ಪ್ರಾಂತ್ಯವೂ ಸಹ ಜರ್ಮನಿಗೆ ಸೇರುವಂತೆ ಕಾಣುತ್ತೆ.

—೦೦೦—

ದೋಣಿಯಲ್ಲಿ ಭೂಪ್ರದಕ್ಷಿಣೆ.

ಮಿ. ಆಸ್ಕರ್ ಸ್ಪೆಕ್‌ರವರ ಅದ್ಭುತ ಸಾಹಸ.

ಜರ್ಮನಿಯಿಂದ ಒಂದು ವಸ್ತ್ರ ಮತ್ತು ರಬ್ಬರಿನಿಂದ ಮಾಡಿದ ದೋಣಿಯಲ್ಲಿ ಕುಳಿತುಕೊಂಡು ಹ್ಯಾಂಬರ್ಗಿನ (ಜರ್ಮನಿ) ಮಿ. ಆಸ್ಕರ್ ಸ್ಪೆಕ್ ಎಂಬವರು 1932ರಲ್ಲಿ ಹೊರಟು ಹಿಂದೂಸ್ಥಾನಕ್ಕೆ ಬಂದಿರುವರು. ಇವರು ದಕ್ಷಿಣ ಕನ್ನಡಕ್ಕೆ ಸಹ ಬಂದಿದ್ದರು. ಈಜಿಗೆ ಮದರಾಸಿನ ಬಂದರಿಗೆ ಬಂದಾಗ ಸಾವಿರಾರು ಮಂದಿ ಇವರ ಸಾಹಸವನ್ನು ನೋಡುವುದಕ್ಕೆ ನೆರೆದಿದ್ದರು. ಮಿ. ಸ್ಪೆಕ್‌ರವರನ್ನು ಮದ್ರಾಸಿನ ಪುರ ಜನರು ಅನೇಕ ವಿಧದಿಂದ ಸತ್ಕರಿಸಿದರು.

—೦೦೦—

ಫ್ರೀಪ್ರೆಸ್ಸಿನ ಅಪೀಲನ್ನು ಕಿತ್ತು ಹಾಕಿದರು

ಕ್ವೆಟ್ಟಾ ಭೂಕಂಪ ಸಂಬಂಧದಲ್ಲಿ ಆಕ್ಷೇಪಕರ ಲೇಖನಗಳನ್ನು ಬರೆದ ಬಗ್ಗೆ ಬೊಂಬಾಯಿ ಸರಕಾರದವರು ಮುದ್ರಣಕಾಯಿದೆಯ ವಿಶೇಷ ಅಧಿಕಾರದಿಂದ ಫ್ರೀಪ್ರೆಸ್ ಪತ್ರಿಕೆಯು 20 ಸಾವಿರ ರೂಪಾಯಿಗಳನ್ನು ಜಪ್ತಿ ಮಾಡಿದ್ದರಷ್ಟೆ ಸರಕಾರದ ಈ ಅಪ್ಪಣೆಯು ವಿರುದ್ಧ ಫ್ರೀಪ್ರೆಸ್ಸ್‌ನವರು ಹೈಕೋರ್ಟಿಗೆ ಅಪೀಲ್ ಮಾಡಿದ್ದರು. ಅಪೀಲಿನ ವಿಚಾರಣೆಯು ತಾ. 16 ರಲ್ಲಿ ಚೀಫ್ ಜಸ್ಟಿಸ್, ಜಸ್ಟಿಸ್ ಬ್ಲಾಕ್‌ವೆಲ್, ಜಸ್ಟಿಸ್ ವಾಡಿಯ ಇವರ ಪೂರ್ಣ ಬೆಂಚಿನ ಮುಂದೆ ನಡೆದು ಅಪೀಲು ಕಿತ್ತು ಹಾಕಲ್ಪಟ್ಟಿತು.

—೦೦೦—

ಸ್ತ್ರೀ ರಾಜ್ಯ.

ಆಫ್ರಿಕಾ ಖಂಡದ ಲದಿಯೂ ಎಂಬ ಪ್ರದೇಶವನ್ನು ಸ್ತ್ರೀಯರೇ ಆಳುತ್ತಾರೆ. ಅಲ್ಲಿಯ ಗಂಡಸರು ಮನೆಗೆಲಸವೂಡಿ ಹೆಂಗಸರ ಊಟವಾದ ಮೇಲೆ ಉಂಡುತ್ತಾರೆ. ಹೆಂಗಸರು ಆಫೀಸಿನ ಕೆಲಸಗಳನ್ನೆಲ್ಲಾ ಮಾಡುತ್ತಾರೆ. ಮಕ್ಕಳ ಜೋಪಾನವು ಗಂಡಸರ ಕೆಲಸ. ಯುದ್ಧ ಮಾಡುವದು ಸ್ತ್ರೀಯರ ಕರ್ತವ್ಯ. ಇಲ್ಲಿಯ ಹೆಂಗಸರು ಕುದುರೆಯ ಮೇಲೆ ಕುಳಿತು ಶೌರ್ಯದಿಂದ ಯುದ್ಧಮಾಡಿ ತಮ್ಮ ದೇಶವನ್ನು ರಕ್ಷಿಸುತ್ತಾರೆ.

—೦೦೦—

ಲಂಡನ್ನಿನಲ್ಲಿ ಗಾಂಧಿ ಜಯಂತಿ.

ಈ ವರ್ಷದ ಗಾಂಧಿ ಜಯಂತಿಯನ್ನು ಲಂಡನಿನ ಅನೇಕ ಕಡೆಗಳಲ್ಲಿ ಆಚರಿಸಿದರು. ಅವರಲ್ಲಿ 'ಫ್ರೆಂಡ್ಸ್ ಆಫ್ ಇಂಡಿಯಾ' ಸಂಸ್ಥೆಯವರು ಲಂಕಾಸ್ಟರ್ ಗೇಟ್' ಎಂಬಲ್ಲಿ ಅತೀ ವಿಜೃಂಭಣೆಯಿಂದ ಆಚರಿಸಿದರು. ಆಗ್ಯೆ ದಿನ ಬಂಧು ಆಂಡ್ರೂಸರವರು ಮಹಾತ್ಮರ ವಿಷಯವಾಗಿಯೂ ಮತ್ತು ಭಾರತದ ಈಗಿನ ವಿಷಯವಾಗಿಯೂ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನೇಕ ಭಾರತೀಯರು ಮತ್ತು ಆಂಗ್ಲೇಯರು ಸೇರಿದ್ದರು.

—೦೦೦—

ವಿಚಿತ್ರ ರೂಪದ ಮಕ್ಕಳು.

ಉತ್ತರ ಹಿಂದುಸ್ಥಾನದ ಶಾಹಾಬಾದ ಜಿಲ್ಲೆಯ ಸಾಯದ್‌ಪುರ ಎಂಬಲ್ಲಿ ಒಂದು ವಿಶೇಷತರದ ಮಗುವು ಜನಿಸಿತ. ಇದಕ್ಕೆ ಮೈಕುಂಬಾ ಕೋತಿಗಳೋಪಾದಿಯಲ್ಲಿ ರೋಮವಿದ್ದು, ಕೋತಿಯ ಮುಖದಂತೆ ಮುಖವಿತ್ತು. ಇದಕ್ಕೆ ಬಾಲ ಮೊಕ್ಕ ಇರಲಿಲ್ಲ. ಇದು ಜನಿಸಿದ ಸ್ವಲ್ಪ ಸಮಯದ ನಂತರ ಮೃತವಾಯಿತು.

ಹೀಗೆಯೇ ಅದೇ ಜಿಲ್ಲೆಯ ಇನ್ನೊಂದು ಹಳ್ಳಿಯಲ್ಲಿ ಇನ್ನೊಂದು ಆಶ್ಚರ್ಯಕರ ಮಗುವು ಜನಿಸಿದೆ. ಇದಕ್ಕೆ ಕೈ ಎ, ಮೂಗುಗಳಿಲ್ಲ. ಇದರ ಬಾಯಿಯು ಯಾವಾಗಲೂ ತೆರೆದುಕೊಂಡೇ ಇರುವುದು. ತಾಯಿಯು ಹಾಲನ್ನು ಎಳೆಯುಲು ಇದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಈ ಮಗುವು ಅರೋಗ್ಯಕರವಾಗಿದೆ. ಇದು ಒಂದು ವಿಚಿತ್ರ ರೀತಿಯಲ್ಲಿ ಅಳುತ್ತದೆ.

—೦೦೦—

ಹೃತ್ಪೂರ್ವಕವಲ್ಲದ ಮೂನಪತ್ರ.

ಮದ್ರಾಸ್ ಕಾರ್ಪೊರೇಶನ್ನಿನ ಮೂನಪತ್ರವನ್ನು ಶ್ರೀ ನರೀಮೂನರು ತಿರಸ್ಕರಿಸಿದರು.



ಬೊಂಬಾಯಿಯ ಮೇಯರರಾದ ಶ್ರೀ ಕೆ. ಎಫ್ ನರೀಮೂನರು ಮದ್ರಾಸಿಗೆ ಬಂದಾಗ ಅವರಿಗೆ ಕಾರ್ಪೊರೇಶನಿನ ಪರವಾಗಿ ಮೂನಪತ್ರ ಕೊಡಬೇಕೆಂಬ ಠರಾವು ಪಾಸಾಗಿತ್ತು. ಆದರೆ ಮದ್ರಾಸ್ ಕಾರ್ಪರೇಶನ್ನಿನವರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬೂರಾಜೇಂದ್ರಪ್ರಸಾದರಿಗೆ ಮೂನಪತ್ರವನ್ನು ಕೊಡಲು ಒಪ್ಪದೆ ಅವರನ್ನು ಅವಮಾನಗೊಳಿಸಿದ್ದರಿಂದ ಅಂಥ ಕಾರ್ಪರೇಶನ್ನಿನ ಮೂನಪತ್ರವನ್ನು ತಾವು ಸ್ವೀಕರಿಸುವದಿಲ್ಲೆಂದು ನೀರ ನರೀಮೂನರು ತಿಳಿಸಿದರು.

—೦೦೦—

ವರ್ಣ ದ್ವೇಷ ಇನ್ನೂ ಇದೆ.

ಇಂಗ್ಲೆಂಡಿನಲ್ಲಿ ಈಗ ವರ್ಣ ದ್ವೇಷದ ಪ್ರಸಕ್ತವೇ ಇಲ್ಲವೆಂಬದು ನಂಬಲಾಗದ ವಿಷಯ. ಆಗಿಂದಾಗ್ಯೆ ಅಲ್ಲಿ ಕಪ್ಪು ಜನರ ಮೇಲೆ ಅವರಲ್ಲೂ ಭಾರತೀಯರ ಮೇಲೆ ನಾನಾ ತರದ ವರ್ಣ ದ್ವೇಷಗಳು ಪ್ರತ್ಯಕ್ಷಗೊಳ್ಳುತ್ತಲಿದೆ. ಮೊನ್ನೆಯಾಗಿ ಭಾರತದ ಹಿರ್ವ ರಾಜ ಕುಮಾರಿಯವರಿಗೆ ಊಟ ಕೊಳ್ಳಲಿಕ್ಕೆ ಬಾಡಿಗೆಗೆ ಒಂದು ಕೋಣೆಯೇ ದೊರಕದಂತಾಯಿತಂತೆ. ರಾಜ ಮನೆತನದವರಾದೇನು, ಸಾಮಾನ್ಯ ಬಡವನಾದರೇನು ಬ್ರಿಟಿಷರ ದೃಷ್ಟಿಯಲ್ಲಿ ಎಲ್ಲರೂ ನಿಕೃಷ್ಟ ಜೀವಿಗಳೇ!

NOTICE.

The Civil Surgeon and his Assistants will give lectures (Clinical) on anti-natal care, mother and child welfare and venereal diseases on the following days:—

(1) Anti-natal, Mother & Child welfare. } Monday 2 to 4 p. m, Friday 12 to 1 p m.

(2) Venereal diseases —Wednesday 3 to 4 p. m.

The lectures will begin from 1st November 1935 in the Civil Hospital, Mercara

There are various dangers which beset the pregnant woman; she has therefore to be cared for in a special way. In these lectures it will be explained what precautions and methods woman should adopt in preparation for their babies.

The Infant mortality is unduly high, because of the many difficulties in the way of rearing families in India It will be explained in these lectures how to bring up a healthy baby in a simple and cheap manner.

Venereal diseases are a menace tn this country. At the weekly clinics help will be given in the prevention and treatment of these also.

There will be occasional lectures on birth control.

Civil Hospital, Mercara, 23rd October, 1935.

R. D. MacRae, *Captain I. M. S, Civil Surgeon, Coorg.*

ಪ್ರಕಟಣೆ.

ಸಿವಿಲ್ ಸರ್ಜನ್‌ರವರೂ, ಅವರ ಕೈಕೆಳಗಿನ ಅಧಿಕಾರಿಗಳೂ ಈ ಕೆಳಗೆ ಹೇಳಿರುವ ದಿವಸಗಳಲ್ಲಿ ಗರ್ಭಿಣಿ ಸ್ತ್ರೀಯರ ಎಚ್ಚರಿಕೆ, ಮಗು ಬಾಣಂತಿಯರ ಆರೋಗ್ಯ ಮತ್ತು ಮೇಹ ಜಾಡ್ಯಗಳೂ ಇವುಗಳನ್ನು ಕುರಿತು ಭಾಷಣ ಮಾಡುವರು.

1. ಗರ್ಭಿಣಿ ಸ್ತ್ರೀಯರ ಎಚ್ಚರಿಕೆ ಮಗು ಬಾಣಂತಿಯರ ಆರೋಗ್ಯ } ಸೋಮವಾರ ಸಾಯಂಕಾಲ 2 ರಿಂದ 4 ರ ವರೆಗೆ, ಶುಕ್ರವಾರ ಮಧ್ಯಾಹ್ನ 12—1 ವರೆಗೆ

2. ಮೇಹ ಜಾಡ್ಯಗಳು } ಬುಧವಾರ ಸಾಯಂಕಾಲ 3 ರಿಂದ 4ರ ವರೆಗೆ

ಈ ಭಾಷಣಗಳು 1935 ನೇ ಇಸವಿ ನವಂಬರ್ 1 ರಿಂದ ಸಿವಿಲ್ ಆಸ್ಪತ್ರೆಯಲ್ಲಿ ಪ್ರಾರಂಭವಾಗುವುವು.

ಗರ್ಭಿಣಿ ಸ್ತ್ರೀಯರಿಗೆ ಒದಗಬಹುದಾದ ಅಪಾಯಗಳು ಅನೇಕವಾಗಿವೆ. ಆದುದರಿಂದ ಅವರ ವಿಷಯದಲ್ಲಿ ವಿಶೇಷವಾದ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಹೆಂಗಸರು ಪ್ರಸವಕ್ಕೆ ಮೊದಲು ಯಾವ ರೀತಿ ಜಾಗ್ರತೆಯಿಂದಿರಬೇಕೆಂದು ಈ ಭಾಷಣಗಳು ತಿಳಿಸುತ್ತವೆ.

ಹಿಂದೂ ದೇಶದಲ್ಲಿ ಮಕ್ಕಳನ್ನು ಸಾಕಲು ಇರುವ ತೊಂದರೆಗಳಿಂದ ಮಕ್ಕಳ ಸಾವಿನ ಸಂಖ್ಯೆಯು ಬಹಳವಾಗಿದೆ. ಈ ಭಾಷಣಗಳಲ್ಲಿ ಹೆಚ್ಚು ಕಷ್ಟವೂ ವೆಚ್ಚವೂ, ಇಲ್ಲದೆ ಮಗುವನ್ನು ಆರೋಗ್ಯವಾಗಿ ಸಾಕುವುದನ್ನು ವಿವರಿಸುವರು.

ಮೇಹ ಜಾಡ್ಯಗಳ ಮತ್ತು ಚರ್ಮರೋಗಗಳ ಕಾಟವು ಇಲ್ಲಿ ಹೆಚ್ಚಾಗಿದೆ. ಪ್ರತಿವಾರ ಭಾಷಣಗಳು ನಡೆಯುವ ಸಮಯದಲ್ಲಿ ಈ ರೋಗಗಳೂ ಬರದಂತೆ ಮಾಡಲೂ, ಬಂದಾಗ ನಿವಾರಣೆ ಮಾಡಲೂ ಸಹಾಯವು ದೊರೆಯುವುದು.

ಸಂತಾನ ನಿರೋಧದ ವಿಚಾರವಾಗಿಯೂ ಆಗಾಗ ಭಾಷಣಗಳು ನಡೆಯುವುವು.

ಸಿವಿಲ್ ಆಸ್ಪತ್ರೆ, ಮಡಿಕೇರಿ, 23-10-35.

ಆರ್. ಡಿ. ಮೆಕ್ರೈ, ಕ್ಯಾಪ್ಟನ್ ಐ. ಯಂ. ಎಸ್. ಸಿವಿಲ್ ಸರ್ಜನ್, ಕೊಡಗು.

"ಗಾಂಧಿಯುಗ."

ಗೋಣಿಕೊಪ್ಪಲಲ್ಲಿ ಶ್ರೀ. ದಿವಾಕರರ ಭಾಷಣ.

ಈ ತಾ 13 ನೇ ಆದಿತ್ಯವಾರ ಧಾರವಾಡದ ಶ್ರೀ. ಆರ್. ಆರ್. ದಿವಾಕರರು ಗೋಣಿಕೊಪ್ಪಲ್ಲಲ್ಲಿ 'ಗಾಂಧಿಯುಗ' ಎಂಬದನ್ನು ಕುರಿತು ಭಾಷಣ ಮಾಡಿದರು. ಸಭೆಯು ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ. ಪಿ. ಐ. ಬೆಳ್ಯಪ್ಪನವರು—'ಎಂ ಎ. ಎಲ್'ಎಲ್. ಬಿ. ಪದವೀಧರರಾದರೂ ಆ ಜ್ಞಾನವನ್ನು ತನ್ನ ಉದರ ಪೋಷಣೆಗಾಗಿ ಉಪಯೋಗಿಸದೆ, ದೇಶಸೇವೆಗಾಗಿ ತನ್ನ ಸರ್ವಸ್ವವನ್ನೂ ಧಾರೆ ಎರೆದ ಒಬ್ಬ ಪ್ರಾಮುಖ್ಯ ಕನ್ನಡಿಗ ಮುಂದಾಳು, ದೇಶದ ಸ್ವಾತಂತ್ರ್ಯಕ್ಕಾಗಿ ಸ್ವಾರ್ಥತ್ಯಾಗಮಾಡಿ ಸುಮಾರು ಏಳು ವರ್ಷಗಳ ವರೆಗೆ ಜೈಲುವಾಸವನ್ನು ಅನುಭವಿಸಿದ ಧುರೀಣರೂ ಆದ ಶ್ರೀ ದಿವಾಕರರು ಈಗ ನಿಮ್ಮ ಮುಂದೆ ಭಾಷಣ ಮಾಡುವರು' ಎಂದು ಭಾಷಣಕಾರರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು.

ಶ್ರೀ. ಆರ್. ಆರ್. ದಿವಾಕರರು ಅಂಗದ್ವೇನೆಂದರೆ—'ನಾನು ದೊಡ್ಡ ತ್ಯಾಗಿ, ದೇಶದ ಸೇವೆ ಮಾಡಿದವ, ಕಷ್ಟ ಪಟ್ಟವ, 4—6 ಸಾರೆ ಜೈಲಿಗೆ ಹೋಗಿ ಬಂದವ, ಎಂದು ಹೇಳಿದರು. ಆದರೆ ಇದೆಲ್ಲ ನಾನು ದೇಶದ ಮೇಲೆ ಮಾಡಿದ ಉಪಕಾರವೊ, ನಿಮ್ಮ ಮೇಲೆ ಮಾಡಿದ ಉಪಕಾರವೊ? ನಾನು ಇದೇ ಭೂಮಿಯಲ್ಲಿ ಹುಟ್ಟಿ, ಬೆಳೆದು, ಇಲ್ಲಿಯೇ ಬಾಳುವವನು; ನಾನು ಈ ವರೆಗೆ ಸಂಸ್ಕಾರಪಡೆದು, ಕಲಿತು, ದೊಡ್ಡವನಾದದ್ದು ಈ ಸಮಾಜದಲ್ಲಿ, ಈ ಕನ್ನಡ ನಾಡಿನಲ್ಲಿ, ನಿಮ್ಮಲ್ಲಿ; ಅಂದ ಬಳಿಕ ನಾನು ನಿಮ್ಮಿಂದ, ಈ ಭೂಮಿಯಿಂದ ಪಡೆದುದನ್ನು ಮರಳಿ ನಿಮ್ಮೆಲ್ಲರಿಗೂ ಸೇವಾರೂಪದಿಂದ ಕೊಟ್ಟು ಬಿಡಬೇಕು ಎಂಬ ಋಣವನ್ನು ಕಟ್ಟಿಕೊಂಡು ನಾನೆಲ್ಲಿ ಹೋಗಲಿ, ಇನ್ಯಾರಿಗೆ ಕೊಡಲಿ, ಅದನ್ನೇನು ಸತ್ಯ ಬಳಿಕ ಇನ್ಯಾರಿಗಾದರೂ ಕೊಡಬಹುದೆ ವಿಷಯವೇ? ಅಲ್ಲ. ಸರ್ವಥಾ ಅಲ್ಲ. ನಾನು ಗಳಿಸಿದುದನ್ನೆಲ್ಲ, ನನ್ನ ಧನ, ನನ್ನ ವಿದ್ಯೆ, ನನ್ನ ಗುಣ ಮುಂತಾದವುಗಳನ್ನೆಲ್ಲ ಪೂರ್ಣವಾಗಿ ನಿಮ್ಮೆಲ್ಲರಿಗೆ, ಈ ಸಮಾಜಕ್ಕೆ ಅರ್ಪಿಸಿಬಿಡುವದೇ ನನ್ನ ಕರ್ತವ್ಯವು. ಹಾಗೆ ನಾನು ಮಾಡದಿದ್ದರೆ ನಾನು ಕಳ್ಳನು. ಇದು ನಾನು ಯಾರ ಮೇಲೂ ಮಾಡುವ ಉಪಕಾರವಲ್ಲ. ನೀವು ಈ ಪರಿ ನನ್ನ ಸೇವೆಯನ್ನು ಸರಿಮಾಡಿಕೊಳ್ಳುವದು, ನೀವೇ ನನ್ನ ಮೇಲೆ ಮಾಡಿದ ಉಪಕಾರವೆಂದು ನಾನು ತಿಳಿಯುತ್ತೇನೆ.'

'ಇನ್ನೊಂದು ಸಂಗತಿ. ನಾವು ಇಷ್ಟೊಂದು ಸಾರಿ ಜೈಲಿಗೆ ಹೋದರೆ ಇಲ್ಲವೆ ಕಷ್ಟ ಪಟ್ಟರೆ ನಾವು ದೊಡ್ಡ ಕೆಲಸವನ್ನು ಮಾಡಿದೆವೆಂದು ತಿಳಿದುಕೊಳ್ಳುತ್ತೇವೆ. ಇದು ತಪ್ಪು. ನಾವು ದೊರಕಿಸತಕ್ಕ ದೊಡ್ಡ ಸ್ವರಾಜ್ಯದಂಥ ವಸ್ತು ಎತ್ತ, ನಾವು ಮಾಡಿದ ಅಲ್ಪ ಕಾರ್ಯವೆತ್ತ! ಈ ಸಂತೆಯಲ್ಲಿ ಹೋಗಿ ಒಂದು ದೊಡ್ಡ ಆಕಳನ್ನು ಕೊಳ್ಳಲಿಕ್ಕೆ ಯಾರಾದರೂ 6 ಕಾಸು ಕೊಡ ಹೋದರೆ ನಾವು ಅವನು ಹುಚ್ಚನೆಂದು ಹೇಳಲಿಕ್ಕಿಲ್ಲವೆ? ಆದುದರಿಂದ ಇಷ್ಟರಿಂದ ಸಂತುಷ್ಟರಾಗಿರದೆ ಇದಕ್ಕೂ ಹೆಚ್ಚಿನ ಕಾರ್ಯವನ್ನು ಮಾಡಲು ಕೂಡುವ, ಒಕ್ಕಟ್ಟಾಗುವ, ಸಂಘಟನೆಯನ್ನು ಮಾಡುವ, ಸಾಮರ್ಥ್ಯವನ್ನು ಬೆಳೆಸುವ ಹಾಗೂ ಸ್ವರಾಜ್ಯವನ್ನು ಗಳಿಸುವ.'

'ಈ ಹೊತ್ತು ನಾನು ನಿಮಗೆ 'ಗಾಂಧಿ ಯುಗ'ದ ಬಗ್ಗೆ ಹೇಳತಕ್ಕವನಿದ್ದೇನೆ ಈಗಿನದು 20 ನೇ ಶತಮಾನ. ಇದು ಶೋಕಿನ. ಜೈನಿಯ ಯುಗ. ಇದು ಯಂತ್ರ ಯುಗ, ಇದು ಸಂಪತ್ತುಳ್ಳವರ ಯುಗ. ಇದು ಹಿಂಸೆಯ ಯುಗ ಶಸ್ತ್ರಾಸ್ತ್ರಗಳ ಯುಗ. ಆದರೆ ಇವೆಲ್ಲವುಗಳಿಗೆ ವಿರುದ್ಧವಾಗಿ ಮಹಾತ್ಮ ಗಾಂಧಿಯವರು ತಮ್ಮ ಸುಂದರವಾದ ಉಪದೇಶವನ್ನು ಹೇಳಿ ತಮ್ಮ ದಿವ್ಯ ಸಂದೇಶವನ್ನು ಬೀರುತ್ತಲಿದ್ದಾರೆ. ಅವರತ್ತ ನೋಡಿರಿ, ನೀವೆಲ್ಲರೂ ಅವರ ದರ್ಶನವನ್ನು ಪಡೆವಿರುವಿರಿ ಈಗಿನ ಮೂದರಿಯ ಮನುಷ್ಯನೆಂದರೆ ಬೂಟು, ಪಾಟ್ಲೂನು ಹಾಕಿ, ನೆಕ್ ಟೈ ಕಾಲರಗಳನ್ನು ಬಿಗಿದು ಶೋಕಿನಿಂದ ಸಾಗುವನು. ಆದರೆ ಗಾಂಧಿಯವರು ಅತ್ಯಂತ ಸಾದಾತನವನ್ನು ಕಲಿಸುವರು. ಶುದ್ಧ ಖಾದೀ ಬಟ್ಟೆಯನ್ನುಡಲು ಅವರು ಹೇಳುವರು. ಇಷ್ಟೇ ಅಲ್ಲ, ಅದನ್ನು ಕೂಡ ತೀರ ಕಡಿಮೆ ಉಪಯೋಗಿಸಬೇಕೆಂದು ಅವರು ಸಾರುವರು.'

'ಈಗಿನ ಕಾಲದಲ್ಲಿ ನಾನಾ ತರದಿಂದ, ಒಳ್ಳೇತನದಿಂದಲೊ, ದುಷ್ಟತನದಿಂದಲೊ, ಪ್ರಾಮಾಣಿಕತನದಿಂದಲೊ, ಅನ್ಯಾಯಾಮಾಣಿಕತನದಿಂದಲೊ, ಸತ್ಯದಿಂದಲೊ ಅಸತ್ಯದಿಂದಲೊ ಅನ್ಯರನ್ನು ವೋಸಗೊಳಿಸಿಯಾಗಲಿ, ಅನ್ಯರನ್ನು ಶೋಷಿಸಿ (expliot) ತಾವು ಹಣವನ್ನು ಪಡೆಯಬೇಕು, ಎಂಬುದೇ ಸಾಮಾನ್ಯ ಜನರ ಹವಣಿಕೆಯಾಗಿದೆ. ಇದಕ್ಕೆ ಪೂರಾ ವಿರುದ್ಧವಾಗಿ ಮಹಾತ್ಮರು ತಮ್ಮ ಕಡೆಗೆ ಇದ್ದ ಲಕ್ಷಾಂತರ ರೂಪಾಯಿಗಳನ್ನು ಕೂಡ ಒಂದು ಆಶ್ರಮಕ್ಕೆ ಕೊಟ್ಟ ತಾವು ನಿಷ್ಕಾಂಚನರಾಗಿ ಸಮಾಜದ ಸೇವೆಗೆಂದು ನಿಂತರು. ತಮ್ಮ ಕಡೆಗೆ ಹಣವನ್ನಿಟ್ಟುಕೊಳ್ಳುವುದೆಂದರೆ ಅದೊಂದು ಕಳ್ಳತನವೆಂದು ಅವರು ಸಾರಿದರು!'

'ಸತ್ಯಲೂ ಯಾವ ದೇಶದಲ್ಲಿಯೂ ಪ್ರತಿಯೊಂದು ಕೆಲಸಕ್ಕೂ ಪ್ರಚಂಡವಾದ ಯಂತ್ರಗಳು ಉಪಯೋಗಿಸಲ್ಪಡುತ್ತಿರುವಾಗ ಮಹಾತ್ಮ ಗಾಂಧಿಯವರು ಅದನ್ನೆಲ್ಲ ಅಲ್ಲಗಳೆದು ಎಲ್ಲ ವಸ್ತುಗಳನ್ನು ಕೈಯಿಂದಲೇ ತಯಾರಿಸಬೇಕು, ಅದೇ ಉತ್ತಮ, ಎಂದು ಠಾಟಿಯಿಂದ ನೂಲುವ ಹಾಗೂ ಕೈಮಗ್ಗದಿಂದ ನೇಯುವ ಕಾರ್ಯವನ್ನು ಪ್ರಾರಂಭಿಸಿದರು'

'ಎಲ್ಲ ಶಾಸ್ತ್ರಜ್ಞರೂ ಹಗಲಿರುಳು ದುಡಿದು ಶಸ್ತ್ರಾಸ್ತ್ರಗಳನ್ನು ಸಿದ್ಧಗೊಳಿಸಿ ಯುದ್ಧಕ್ಕೆ ಸನ್ನದ್ಧರಾಗುತ್ತಿರುವ ಈ ಕಾಲದಲ್ಲಿ, ಬ್ರಿಟಿಷರಂಥ ಬಲಾಢ್ಯರು, ಜಗತ್ತಿನಲ್ಲಿ ಎಲ್ಲಕ್ಕೂ ಹೆಚ್ಚಿನ ಹಡಗು ಪಡೆಯನ್ನಿಟ್ಟುಕೊಂಡವರು, ಕೇವಲ ಶಕ್ತಿಯಿಂದ ಯುಕ್ತರಾಗಿ ನಮ್ಮ ಮೇಲೆ ಆಳುತ್ತಿರುವಾಗ ಮಹಾತ್ಮ ಗಾಂಧಿಯವರು ಶುದ್ಧ ಅಹಿಂಸಾವೃತ್ತಿಯಿಂದ ನಾವು ಹೋರಾಡಲಿಕ್ಕೆ ಬೇಕು, ಶತ್ರುಗಳನ್ನು ಕೂಡ ಪ್ರೇಮದಿಂದ ನಾವು ಕಾಣಬೇಕು, ಎಂಬ ತತ್ವದಿಂದ ನಡೆಯುತ್ತಿರುವರು.'

'ಹೀಗೆ ಒಂದಲ್ಲ, ಎರಡಲ್ಲ ಅನೇಕ ವಿಷಯಗಳಲ್ಲಿ ಗಾಂಧಿಯವರು ಹೊಸ ಯುಗವನ್ನು ಪ್ರಾರಂಭಿಸಿರುವರು. ಆದುದರಿಂದಲೆ ಇದಕ್ಕೆ ನಾನು 'ಗಾಂಧಿಯುಗ'ವೆಂದು ಹೆಸರನ್ನಿಟ್ಟಿದ್ದು. ಅವರು ಹೀಗೇಕೆ ಮಾಡುತ್ತಿರುವರು? ಈ ಪ್ರಶ್ನೆಯು ಮಹತ್ವದ್ದಾಗಿದೆ. ಈ ಪ್ರಶ್ನೆಗೆ ನಾವು ಉತ್ತರ ಕೊಟ್ಟರೆ ಮಹಾತ್ಮರ ಜೀವನದ ರಹಸ್ಯವು ನಮಗೆ ಹೊಳೆಯುವದು. ಮಹಾತ್ಮ ಗಾಂಧಿಯವರು ಈ ತಮ್ಮ ವಿಚಾರಗಳಿಂದ ಇಡೀ ಹಿಂದುಸ್ಥಾನದಲ್ಲಿ ಪ್ರಚಂಡ ಜಾಗ್ರತಿಯನ್ನು ಮಾಡಿರುವರೆಂಬುದನ್ನು ಎಲ್ಲರೂ ಬಲ್ಲರು. ಅದನ್ನು ಅವರ ಶತ್ರುಗಳು ಕೂಡ ಅಲ್ಲಗಳೆಯರು.'

'ಮಹಾತ್ಮರು ಇದನ್ನೆಲ್ಲ ಮಾಡುವದು ಅತ್ಯಂತ ಬಡವರಿಗಾಗಿ, ಹೀನ ದೀನರಿಗಾಗಿ, ಅಜ್ಞಾರಿಗಾಗಿ, ಹಿಂದುಸ್ಥಾನದಲ್ಲಿ ಪತಿತರೆನಿಸಿಕೊಳ್ಳುವವರಿಗಾಗಿ. ಮಹಾತ್ಮರು ಈ ರೀತಿ ಪ್ರಾರಂಭ ಮಾಡದಿದ್ದರೆ ಯಾವ ಕೆಲಸವೂ ಎಳ್ಳಷ್ಟೂ ಆಗುತ್ತಿರಲಿಲ್ಲ. ಅವರು ಸತತವೂ ಬಡವರ ವಿಚಾರವನ್ನೇ ಮಾಡುತ್ತಿರುವರು ಅವರು ದರಿದ್ರನಾರಾಯಣನ ಉಪಾಸಕರು, ದೀನರ ಕೈವಾಡಿಗಳು. ಈಗ ಪ್ರಕೃತದಲ್ಲಿ ಪ್ರತಿಯೊಬ್ಬ ಹಿಂದೀಯನಿಗೂ ಹೊಟ್ಟೆ ತುಂಬ ಊಟವು ಹೇಗೆ ದೊರೆಯಬಲ್ಲದು, ಈ ಬಗ್ಗೆ ವಿಚಾರವನ್ನು ಮಾಡುತ್ತಿರುವರು. ಖಾದಿಯನ್ನು ಹುಟ್ಟಿಸುವ ಪ್ರತಿಯೊಬ್ಬನಿಗೆ ಹೊಟ್ಟೆ ತುಂಬ ಊಟವನ್ನು ದೊರಕಿಸಿ ಕೊಡುವದು ನಮ್ಮೆಲ್ಲರ ಕರ್ತವ್ಯವೆಂದು ಅವರು ಮೊದಲು ಸಾರಿರುವವರು. ಅದೇ ರೀತಿ ಪ್ರತಿಯೊಂದು ಕೆಲಸ ಮಾಡುವವನಿಗೂ—ಅವನು ಪ್ರಾಮಾಣಿಕ ರೀತಿಯಿಂದ 8 ತಾಸು ದುಡಿದರೆ—ಹೊಟ್ಟೆ ತುಂಬ ಊಟವನ್ನು ಹಾಕಲಿಕ್ಕೇ ಬೇಕು, ಅದು ಅವನ ಜನ್ಮಸಿದ್ಧವಾದ ಹಕ್ಕು ಇದೆ ಎಂದು ಅವರು ಸಾರುತ್ತಿರುವರು. ಹೊಲದಲ್ಲಿ, ತೋಟದಲ್ಲಿ, ಯಾವದೇ ಕೆಲಸ ಮಾಡಿದರೂ ಅವನಿಗೆ ಹೊಟ್ಟೆ ತುಂಬ ಅನ್ನವೆಂಬದು ಅತ್ಯಾವಶ್ಯಕ, ಅದು ಪ್ರತಿಯೊಬ್ಬನಿಗೂ ಸಿಕ್ಕದೇ ಹೋದರೆ ಸಮಾಜ ರಚನೆಯಲ್ಲಿ ಎಲ್ಲಿಯೊದರೂ ತಪ್ಪು ಇದೆ. ಅದನ್ನು ಸುಧಾರಿಸಲಿಕ್ಕೆ ಬೇಕು, ಎಂದು ಅವರು ಹೇಳುತ್ತಿರುವರು.'

'ಆದುದರಿಂದ ಈ ಮಾತಿನ ಕಡೆಗೆ ಎಲ್ಲರೂ ಲಕ್ಷಗೊಡಲಿಕ್ಕೆ ಬೇಕು. ಪ್ರತಿಯೊಬ್ಬ ರೈತನು, ಕೂಲಿಕಾರನು, ಬೇಸಾಯಗಾರನು ತನ್ನ ಕೆಲಸದಿಂದ ತನಗೆ ಹೊಟ್ಟೆ ತುಂಬ ಸಿಕ್ಕುತ್ತದೊ ಇಲ್ಲವೊ ಎಂಬುದನ್ನು ಪರೀಕ್ಷಿಸಬೇಕು. ಸಮಾಜದ ಸೇವೆ ಮಾಡುವವರು ಇತ್ತ ಲಕ್ಷಗೊಡದಿದ್ದರೆ ಸಮಾಜದಲ್ಲಿ ಕ್ರಾಂತಿಯಾಗುವದು. ಬಡವರು ರೇಗುವರು, ಹಾಗೂ ಸಮಾಜವೆಲ್ಲ ಹಾಳಾಗಿ ಹೋಗುವದು. ಆದುದರಿಂದ ತೀವ್ರವೇ ಎಚ್ಚರಗೊಂಡು ನಾವು ಸಮಾಜದಲ್ಲಿ ಸುಧಾರಣೆ ಮಾಡಿಕೊಳ್ಳಲಿಕ್ಕೆ ಬೇಕು. ಶೋಷಣವೃತ್ತಿಯನ್ನು (exploitation) ಬಿಟ್ಟು ಬಿಡಲಿಕ್ಕೆ ಬೇಕು. ಅಂದರೆ ಮಾತ್ರ ಸಮಾಜವು ಸುಸಂಘಟಿತವೂ ಸಮರ್ಥವೂ ಆಗಬಲ್ಲದು.'

'ಇದೇ ಗಾಂಧಿ ಯುಗದ ರಹಸ್ಯವಿರುವದು. ಇದನ್ನು ನಾವೆಲ್ಲರೂ ಸಾಧಿಸಲು ಯತ್ನಿಸುವ.'

ನಮ್ಮಲ್ಲಿ ಬೇಕಾದಷ್ಟು ಹಣವಿದ್ದರೂ ನಾವು ಬಡವರಂತೆ ಇದ್ದು ಬಡವರಿಗೆ ಹಿತವಾಗುವಂತೆ ಸತತವೂ ನಮ್ಮ ಹಣದ ಉಪಯೋಗವನ್ನು ನಾವು ಮಾಡಬಕ್ಕದ್ದು.

ನಮ್ಮಲ್ಲಿ ಬೇಕಾದಷ್ಟು ವಿದ್ಯೆ ಇದ್ದರೂ ನಾವು ಅದನ್ನು ಎಲ್ಲರಿಗೂ ಕಲಿಸಲು ಒಂದೇ ಸವನೆ ಯತ್ನಿಸುತ್ತಿರಬೇಕು.

ನಾವು ಅನ್ಯರನ್ನು ಹಿಂಸೆ ಪಡಿಸದೆ ಜೀವಿಸಲು ಯತ್ನಿಸತಕ್ಕದ್ದು.

ತೀರ ಬಡವರಲ್ಲಿ ಬಡವನಾದವನಿಗೆ ಕೂಡ ಹೊಟ್ಟೆ ತುಂಬ ಊಟವು ಕೆಲಸ ಮಾಡಿದರೆ ದೊರೆಯುವಂತೆ ಸಮಾಜದ ರಚನೆಯನ್ನು ನಾವು ಮಾಡಲಿಕ್ಕೆ ಬೇಕು.'

ಮುಂದೇನು?

(ಲೇಖಕರು:—ಪಂಡಿತ ಶಾರಾನಾಥರು, ತುಂಗಭದ್ರ.)

ಸಕಲ ಜೀವರಾಶಿಗಳಲ್ಲಿಯೂ ಅರಿತಾಗಲೀ, ಅರಿಯದಾಗಲೀ ನಡೆಯುತ್ತಿರುವ ಪ್ರಶ್ನೆಯು ಇದೊಂದೇ. ಇದು ಜೀವಿತದ ಮುಖ್ಯಲಕ್ಷಣ. ಇದೇ ಜೀವಿತಕ್ಕೆ ಬೇಕಾದ ಆಧಾರ. ಇದೇ ಹುಟ್ಟಿದ ಸೃಷ್ಟಿಯ ಸ್ಥಿತಿಲಯಗಳ ಮೂಲ. ಇದೇ ಜನ್ಮಮರಣಗಳ ಚಕ್ರವನ್ನು ತಿರುಗಿಸುವ ಶಕ್ತಿ. ಇದೇ ಅನಂತ ಯೋನಿಗಳಲ್ಲಿ ಜೀವಿಯನ್ನು ಸಂಚಾರಕ್ಕೆ ಹಚ್ಚುವ ಹುರುಪು. ಇದರಿಂದಲೇ ಗತಿ, ಇದರಿಂದಲೇ ಪ್ರಗತಿ. ಸೂಕ್ಷ್ಮ ದೃಷ್ಟಿಗೆ ಕಂಡು ಬರುವ ಆಹಾರ, ನಿದ್ರಾ, ಭಯ, ಮೈಥುನಗಳು ಮಾತ್ರ ಉಪಿಲ್ಲದೇಹಬದ್ಧ ಏಕಾಣು ಜೀವಿಯು (Ameoba) ಹುಟ್ಟುವುದಕ್ಕೆ ಕಾರಣವೂ ಇದೇ. ಇವೆಲ್ಲವುಗಳ ಸಾರಸಾರವನ್ನು ರಿಯುವಂತೆ ಮಾಡಿ ಆ ಜ್ಞಾನದಿಂದಲೇ ಸಕಲ ಭೋಗ ತ್ಯಾಗಗಳನ್ನು ವಿಮರ್ಶಿಸಿಕೊಂಡು ಸಕಲವನ್ನೂ ಜೈಸುವಂತೆ ಮಾಡಿ ಬಂಧನದಿಂದ ಬಿಡುಗಡೆ ಮಾಡುವ ಶಕ್ತಿಯೂ ಇದೇ. ಕ್ರಿಮಿ ಕೀಟಗಳಲ್ಲಿ ಸುಖ ಮಹತ್ಕಕ್ಕಾಗಿ ಜೀವನ ಸುಖವನ್ನು ಜಲಿಸುವ ಶಕ್ತಿಯೂ ಇದೇ. ಮಾನವನಿಗೆ ಹಿತ ಮಾರ್ಗವನ್ನು ತೋರಿಸಿ ಸತ್ಯ (Self) ವನ್ನು ಸತ್ಯ (Truth) ದೊಡನೆ ಮಾಡಿ ತೀರ್ಥಯಾತ್ರೆ ಸಮನ್ವಯಿಸುವ ಮುಕ್ತಿಯೂ ಇದೇ. ಅಶಾವಾಸನೆಗಳಿಂದ ಜೀವನವನ್ನು ಮುಕ್ತ ಜೀವಿಯನ್ನಾಗಿ ಮಾಡುವದೂ ಇದೇ. ಅನಂತರ ಜ್ಞಾನಾನುಭವಗಳಿಂದ ಬಂಧನವನ್ನು ಬಿಚ್ಚಿ ಬಿಡುಗಡೆಯನ್ನು ಕೊಡುವುದೂ ಇದೆ. ದ್ವೈತ ಸಮೂಹದ ಮೂಲ ಸ್ಫೂರ್ತಿ ಸಮನ್ವಯಗಳೆಲ್ಲವೂ ಇದರಲ್ಲಿವೆ.

ಹುಟ್ಟಿದ ಜೀವಿಗೆ ಮರಣವು ಬಂದೇ ಬರುತ್ತದೆ. ಪ್ರತಿಯೊಬ್ಬ ಮಾನವನಿಗೂ ಇದು ಗೊತ್ತೇ ಇದೆ. ಆದರೆ ಎಂದಾದರೂ ಒಂದು ದಿನ ಸಾಯಲೇ ಬೇಕಲ್ಲವೇ? ಎಂದುಕೊಂಡು ಕೈಕಟ್ಟಿ ಕೂತುಕೊಳ್ಳುವ ಪ್ರಾಣಿಯೊದರೂ ಇದೆಯೇ? ಇಲ್ಲ. ನಿರ್ಮಾಣವು ಕರ್ಮವನ್ನು ಮಾಡಿಸೇಯೇ ತೀರುತ್ತದೆ. ಇಷ್ಟು ಪ್ರಾಪ್ತಿಯಾದರೂ ಈ ಕರ್ಮಕ್ಕೆ ಇಲ್ಲಿ ಸಮಾಪ್ತಿ ಇಲ್ಲ. ಕರ್ಮವು ನಡೆಯುತ್ತಲೇ ಇರಬೇಕು. ಅದಕ್ಕಾಗಿ ಇನು ಹೋದರೂ ತೋರಿಕೆಯು ಹೋಗುವುದೇ ಇಲ್ಲ. ಶ್ವಾಸಕ್ಕೆ ವಿಶ್ವಾಸವೇ ಬಲ. ಆದು ಮುಂದೇನು, ಮುಂದೇನು ಎಂಬ ಶೋಧ ಸಂಚಾರಗಳ ಹುಡಿಗೆ ಮನಸನ್ನು ನಡೆಸುತ್ತಲಿದೆ. ಅಲ್ಲ ಯೋನಿಯು ಕ್ರಿಮಿ ಕೀಟಗಳು, ಮಹಾ ಯೋನಿಯೆಂದು ವಿಷ್ಣುವಿಗೆ ಹೆಸರು; ಇಲ್ಲಿಂದಲ್ಲಿಯ ವರೆಗೆ ಜೀವವನ್ನು ಎಳೆದು ಕೊಂಡು ಹೋಗಿ ವಿಕಾಸಗೊಳಿಸುವ ಶಕ್ತಿಯು ಈ ಮುಂದೇನು ಎಂಬುದರ ಹುರುಪೊಂದೇ.

ಆದರೆ ಮನುಷ್ಯನಿಗೆ ಈ ಸಂಚಾರದ ಪ್ರಜ್ಞೆ ಇದೆ. ಅದರ ವ್ಯಾಪಾರಗಳ ತಿಳುವಳಿಕೆ ಇದೆ. ಅದರ ಸ್ಥಿತಿಗತಿಗಳ ಜ್ಞಾನವಿದೆ. ಅದನ್ನು ಕ್ರಮಪಡಿಸಿ ವಿಕಾಸಗೊಳಿಸುವ ಶಕ್ತಿ ಇದೆ. ಈ ಎಲ್ಲಾ ಗುಣಗಳೂ ಅವನಲ್ಲಿರೋಣದರಿರಿದ ಆತನಿಗೆ ಸ್ವಪ್ರಜ್ಞೆ (Self consiousness) ಇದೆಯೆಂದು ಜ್ಞಾನಿಗಳು ಹೇಳುತ್ತಾರೆ. ಇತರ ಜೀವರಾಶಿಗಳಿಗೆ ಪ್ರಜ್ಞೆ ಮಾತ್ರ ಇದೆ ಹೊರತು ಅದು ತಪ್ಪು ಒಪ್ಪುಗಳನ್ನು ತಿಳಿದುಕೊಂಡು ಅದನ್ನು ಶಾಶ್ವತವಾದ ತತ್ವದೊಡನೆ ಮೇಲಮಿಸುವ ಶಕ್ತಿಯು ಇಲ್ಲ. ಆದುದರಿಂದ ಮನುಷ್ಯನಲ್ಲಿ ಇತರ ಜೀವರಾಶಿಗಳಲ್ಲಿರುವಂತೆಯೇ ಮುಂದೇನು ಎಂಬುವುದು ಇದ್ದರೂ ಆತನು ಅದನ್ನು ಜ್ಞಾನದಿಂದ ಶಾಶ್ವತವಾದ ತತ್ವದೊಡನೆ ಸಮನ್ವಯಿಸುವ ದೃಷ್ಟಿಯಿಂದ ನಡೆಯಿಸತಕ್ಕದ್ದು. ಇತರ ಪ್ರಾಣಿಗಳನ್ನೂ ಮುಂದೇನು ಎಂಬ ಹುರುಪು ಮೂಗು ಹಿಡಿದು ನಡೆಸುತ್ತಿದೆ. ಮಾನವನೋ ತನ್ನಲ್ಲಿರುವ ಆ ಹುರುಪನ್ನು ತನಗೆ ಬೇಕಾದ ಮಾರ್ಗಗಳನ್ನು ತೆರೆಯುವುದಕ್ಕಾಗಿಯೂ, ನಡೆಯುವುದಕ್ಕಾಗಿಯೂ ಉಪಯೋಗಿಸತಕ್ಕದ್ದು. ಆತನಿಗೆ ಜ್ಞಾನವು ವಿಶೇಷವಾಗಿದೆ ಮತ್ತು ಜ್ಞಾನದ ಧರ್ಮವು ಇದೆ.

ಜನರು ನಾನಾ ಪ್ರಕಾರದವರೂ, ಅಂಗದವರೂ ಆಗಿದ್ದರೂ ಅವರೆಲ್ಲರ ಜ್ಞಾನವೂ ಒಂದೇ ಮಾರ್ಗವನ್ನೂ ಒಂದೇ ತತ್ವವನ್ನೂ ಅನಾದಿಯಿಂದ ಸಾರುತ್ತಿದೆ. ಅದೇನು? ಸುಖವು ಬೇರೆ, ಹಿತವು ಬೇರೆ. ಸುಖದ ಪರಿಣಾಮವು ದುಃಖವಾಗಬಹುದು. ಹಿತದ ಪರಿಣಾಮವು ಪ್ರಗತಿಯೊಂದೇ. ಸುಖವು ಅದನ್ನು ಹುಡುಕಿದವನಿಗೆ ಮಾತ್ರ ಸಿಗಬಹುದು; ಹಿತದಿಂದ ಬಹು ಜನರಿಗೆ ನಿಜವಾದ ಪ್ರಗತಿ ಮೂಲವಾದ ಸುಖವು ದೊರೆಯುತ್ತದೆ. ಸುಖದ ಶೋಧವು ಸಕಲ ಜೀವರಾಶಿಗಳಿಗೂ ಇದೆ. ಹಿತದ ಬೋಧವು ಮಾನವ ಜೀವಿಗೆ ಮಾತ್ರವೇ ಇದೆ. ಸುಖವು ಸ್ವಾರ್ಥಪರವು. ಹಿತವು ಸ್ವಪರಾರ್ಥಕ್ಕೂ ಒಳ್ಳೆಯದು. ಸುಖವು ಬರೇ ಭೋಗದಿಂದ ಬರುತ್ತದೆ. ಹಿತಕ್ಕೆ ಯೋಗ ತ್ಯಾಗಗಳೂ ಬೇಕು, ಜ್ಞಾನವೂ ಬೇಕು. ಹಿತ ದೃಷ್ಟಿಯು ಒಂದೇ ವಿಷಯವನ್ನು ಹೇಳುತ್ತದೆ. ಸುಖದೊಡನೆಯೇ ನೆರಳಿನಂತೆ ದುಃಖವೂ ಇರೋಣದರಿಂದ ಶಾಶ್ವತವಾದ ಸುಖವೆಂದರೆ ಹಿತವೇ, ಪರಾರ್ಥ ಬುದ್ಧಿಯೇ. ಪರಾರ್ಥ ಜೀವನದಲ್ಲಿ ಮಾತ್ರ ವೇ ನಿಜವಾದ ಕೊರತೆ ಇಲ್ಲದ ಸ್ವಾರ್ಥವೂ ಇದೆ ಎಂಬುವುದೇ ಇದರ ಸಾರಾಂಶ. ನಮ್ಮ ಯಾವ ಭಾವ ವಿಚಾರ ಕರ್ಮಗಳಿಂದ ಜನತೆಗೆ ಕಷ್ಟ ನಷ್ಟಗಳು ಬರುತ್ತವೋ ಅವುಗಳಿಂದ ನಮಗೂ ಕ್ರಮೇಣವಾಗಿ ಹಾನಿಯಂಟೇಯುಂಟು. ಎಲ್ಲಿ ಅವರ ಇಷ್ಟ ಪ್ರಾಪ್ತಿಯ ಕಡೆಗೆ ದೃಷ್ಟಿ ಇದೆಯೋ ಅಲ್ಲಿ ತಮಗೂ—ತತ್ಕಾಲಕ್ಕೆ ಕಷ್ಟವು ತೋರಿ ಬಂದರೂ—ನಿಜವಾಗಿಯೂ ಶಾಶ್ವತವಾದ ಸುಖವಾಗಿಯೇ ತೀರಬೇಕು. ಇದನ್ನು ವಿವೇಚಿಸಿ ನಡೆಯುವ ಯೋಗ್ಯತೆಯು ಮನುಷ್ಯನಿಗಿದೆ. ಮತ್ತು ಆ ನಿದರ್ಶನದಲ್ಲಿಯೇ ಆತನ ಕರ್ತವ್ಯದ ಉಪದೇಶವೂ ಇದೆ. ಇದನ್ನರಿತು ಆಚರಿಸುವ ಜನತೆಗೆ ಉನ್ನತಿ. ಈ ಜನ್ಮಸಿದ್ಧವಾದ ಹಕ್ಕನ್ನು ಧಿಕ್ಕರಿಸುವ ಜನತೆಗೆ ಅವನತಿಯು ಬಿಟ್ಟದ್ದೇ ಅಲ್ಲ. ದೇಶ ಕಾಲ ಪರಿಸ್ಥಿತಿಗನುಗುಣವಾಗಿ ಎಲ್ಲ ಮಹಾನುಭಾವರು ಅನಾದಿಯಿಂದ ಸಾರಿ ಹೇಳುತ್ತಿರುವ ತತ್ವ ವೊಂದೆ ಇದೊರಿದೇ. ಈ ದಿನ ಮಹಾತ್ಮ ಗಾಂಧಿಯವರು ಸಾರುತ್ತಿರುವ ಖಾದಿಯ ಉಪದೇಶವೂ ಇದೇ.

ಓಂ ತತ್ ಸತ್.

ಕೊಡಗು

ಅಕ್ಟೋಬರ್ ತಾ. ೨೫ನೇ ಶುಕ್ರವಾರ ೧೯೩೫.

ಅಧಿಕಾರ ಸ್ವೀಕಾರ.

ಕಳೆದ ವಾರ ಮದ್ರಾಸು ಪಟ್ಟಣದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗುಗಳು ನಡೆದು ಕೆಲವು ಪ್ರಾಮುಖ್ಯ ತೀರ್ಮಾನಗಳಾದವು. ಇದರ ವಿವರವು ಇನ್ನೊಂದು ಕಡೆ ಕೊಡಲ್ಪಟ್ಟಿದೆ.

ಕಾರಣಾಂತರಗಳಿಂದ ಶಾಸನ ಭಂಗ ಚಳವಳಿಯು ನಿಲ್ಲಿಸಲ್ಪಟ್ಟ ಮೇಲೆ ಕಾಂಗ್ರೆಸ್ ಪಕ್ಷದವರು ನ್ಯಾಯವಿಧಾಯಕ ಸಭೆಗಳಿಗೆ ಪ್ರವೇಶ ಮಾಡಬಹುದೆಂದು ಕಾಂಗ್ರೆಸ್ ಸಭೆಯು ತೀರ್ಮಾನಿಸಿತ್ತು. ಹಾಗೆಯೇ ಕಾಂಗ್ರೆಸ್ ಸದಸ್ಯರುಗಳು ಎಸೆಂಬ್ಲಿಗೂ, ಕೆಲವು ಪ್ರಾಂತೀಕ ಕೌನ್ಸಿಲುಗಳಿಗೂ ಹೊಕ್ಕು ಅಲ್ಲಿಯ ವಾತಾವರಣವನ್ನು ಬದಲಾಯಿಸುತ್ತಿರುವರು. ಈ ಪರಿಣಾಮವನ್ನು ನೋಡುತ್ತಾ, ಮುಂದಿನ ಸುಧಾರಿಸಿದ ಕೌನ್ಸಿಲುಗಳಲ್ಲಿ ಮಂತ್ರಿ ಪದವಿಗಳನ್ನು ಸ್ವೀಕರಿಸುವುದು ಉಚಿತವೆಂದು ಅನೇಕರಿಗೆ ತೋರಿದೆ. ಮುಖ್ಯವಾಗಿ ಮದ್ರಾಸು ಪ್ರಾಂತ್ಯದ ಹಲವು ಕಡೆಗಳಲ್ಲಿ ಈ ಪ್ರಶ್ನೆಯು ಹುರುಪಿನಿಂದ ಚರ್ಚಿಸಲ್ಪಡುತ್ತಿದೆ. ಕಳೆದ ಆಗೊಸ್ತು ತಿಂಗಳಲ್ಲಿ ವಾರ್ಧಾದಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಈ ವಿಷಯವು ಚರ್ಚಿಸಲ್ಪಟ್ಟು, ಇದರ ತೀರ್ಮಾನವನ್ನು ಮುಂದಿನ ಕಾಂಗ್ರೆಸ್ ಮಹಾ ಸಭೆಗೆ ಬಿಡಲಾಯಿತು. ಈ ತೀರ್ಮಾನವು ಅನೇಕರಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ಆದುದರಿಂದ ಮದ್ರಾಸಿನಲ್ಲಿ ನಡೆದ ವರ್ಕಿಂಗ್ ಕಮಿಟಿ ಮತ್ತು ಅ. ಭಾ. ಕಾಂಗ್ರೆಸ್ ಕಮಿಟಿ ಮೀಟಿಂಗುಗಳಲ್ಲಿ ಈ ಪ್ರಶ್ನೆಯು ಪುನಹ ಚರ್ಚಿಸಲ್ಪಟ್ಟಿತು.

ವರ್ಕಿಂಗ್ ಕಮಿಟಿಯವರು ಈ ವಿಚಾರವನ್ನು ಕೂಲಂಕುಷವಾಗಿ ಆಲೋಚಿಸಿ 'ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡಬೇಕೋ, ಬೇಡವೋ ಎಂಬದನ್ನು ತೀರ್ಮಾನಿಸುವ ಸಮಯ ಖಂದಿಲ್ಲ; ಈಗ ತೀರ್ಮಾನಿಸುವದು ಯುಕ್ತವೂ ಅಲ್ಲ' ಎಂದು ನಿಶ್ಚಯಿಸಿ ವಾರ್ಧಾ ಗೊತ್ತುವಳಿಯನ್ನೇ ಪುನಹ ಮಂಜೂರು ಮಾಡಿದರು. ಆದರೆ ಮರುದಿನ ಸೇರಿದ ಅ. ಭಾ. ಕಾಂಗ್ರೆಸ್ ಕಮಿಟಿಯಲ್ಲಿ ಈ ತರಾವಿನ ಚರ್ಚೆಗೆ ಅವಕಾಶ ಮಾಡಿಕೊಟ್ಟರು. ಆ ಸಭೆಯಲ್ಲಿ ಈ ಪ್ರಶ್ನೆಯ ಮೇಲೆ ದೀರ್ಘ ಚರ್ಚೆ ನಡೆಯಿತು. 'ಕಾಂಗ್ರೆಸ್ ಸಂಸ್ಥೆಯು ಕೌನ್ಸಿಲ್ ಪ್ರವೇಶಕ್ಕೆ ಸಮ್ಮತಿಸಿರುವಾಗ್ಯೆ ಮಂತ್ರಿ ಪದವಿ ಸ್ವೀಕಾರಕ್ಕೂ ಒಪ್ಪಿಗೆಯನ್ನೀಯುವುದು ಉಚಿತವಾಗಿದೆ. ಹೊಸ ಸುಧಾರಣೆಗಳು ಎಂಥವೆಂದು ಗೊತ್ತಾಗಿದೆ. ಅವುಗಳಿಗಾಗಿ ಪುಹಾ ಚುನಾವಣೆಗಳು ಪ್ರಾಂತ್ಯಗಳಲ್ಲಿ ಜೋಗಸಿ ನಡೆಯುವವು. ಅಷ್ಟರೊಳಗೆ ಕಾಂಗ್ರೆಸ್ ಪಕ್ಷದವರು ತಮ್ಮ ಧೋರಣೆಯ ಪ್ರಚಾರ ನಡಿಸತಕ್ಕದ್ದು. ಸತ್ಯಾಗ್ರಹವನ್ನು ಹಿಂತೆಗೆದು, ಕೌನ್ಸಿಲು ಪ್ರವೇಶಕ್ಕೆ ಒಪ್ಪಿಗೆಯನ್ನಿತ್ತ ಕಾಂಗ್ರೆಸ್ ಕಮಿಟಿಗೆ ಈ ಪ್ರಶ್ನೆಯನ್ನು ತೀರ್ಮಾನಿಸುವ ಅಧಿಕಾರವಿಲ್ಲವೆನ್ನುವದು ಸರಿಯಲ್ಲ. ಕಾಂಗ್ರೆಸ್ ಮುಂದಾಳುಗಳು ದೇಶಕ್ಕೆ ದಾರಿ ತೋರಿಸಬೇಕಾದ ಕಾಲ ಈಗಲೇ ಈ ಕಮಿಟಿಯಲ್ಲಿ ಇದರ ತೀರ್ಮಾನವಾಗಬೇಕು' ಎಂದು ಮುಂತಾದ ಕಾರಣಗಳಿಂದ ಕೆಲವರು ವರ್ಕಿಂಗ್ ಕಮಿಟಿಯ ತೀರ್ಮಾನವನ್ನು ವಿರೋಧಿಸಿದರು.

ಆದರೂ ಅ. ಭಾ. ಕಾಂಗ್ರೆಸು ಕಮಿಟಿಯವರು ಬಹು ದೊಡ್ಡ ಬಹುಮತದಿಂದ ವರ್ಕಿಂಗ್ ಕಮಿಟಿಯ ತೀರ್ಮಾನಕ್ಕೇ ಸಮ್ಮತಿಯನ್ನಿತ್ತರು. ಪ್ರಕೃತ ಸ್ಥಿತಿಯಲ್ಲಿ ಇದು ನ್ಯಾಯವಾದ ತೀರ್ಮಾನವೆಂದೇ ಹೇಳಬೇಕಾಗಿದೆ. ಇಂಥಾ ಮಹತ್ವದ ಪ್ರಶ್ನೆಯನ್ನು ತೀರ್ಮಾನಿಸುವ ಅಧಿಕಾರವನ್ನು ಕಾಂಗ್ರೆಸು ಮಹಾ ಸಭೆಗೇನೇ ಬಿಡುವುದು ಸರಿಯಾಗಿದೆ. ಮಹಾ ಸಭೆಯು 1936 ನೇ ಮಾರ್ಚ್ ತಿಂಗಳಲ್ಲಿ ಜರಗುವುದು. ಅಷ್ಟರೊಳಗೆ ಪ್ರಾಂತೀಕ ನ್ಯಾಯಸ್ಥಾಪಕಸಭೆಗಳ ಚುನಾವಣೆಗಳು ನಡೆಯುವ ಸಂಭವವಿಲ್ಲ. ಆ ಚುನಾವಣೆಗಳು 1936 ನೇ ವರ್ಷದ ಅಂತ್ಯದಲ್ಲಾಗಲೀ ಯೂ 1937 ರಲ್ಲೋ ಆಗಬಹುದಷ್ಟೆ. ಅಂದ ಮೇಲೆ ಕಾಂಗ್ರೆಸು ಕಮಿಟಿಯವರು ಇಷ್ಟು ತುರ್ತಿನಲ್ಲಿ ತೀರ್ಮಾನಿಸಬೇಕಾದ ಅವಶ್ಯವಿಲ್ಲ. ಪ್ರಪಂಚದ ರಾಜಕೀಯ ವಾತಾವರಣವು ಸ್ಥಿರವಾಗಿಲ್ಲ; ಅದು ದಿನೇ ದಿನೇ ಬದಲಾಗುತ್ತಿದೆ. ಆದುದರಿಂದ ಇಂಡಿಯಾದ ಪರಿಸ್ಥಿತಿಯೂ ಈಗಿರುವಂತೆಯೇ ಮುಂದಕ್ಕೂ ಇರುವದೆಂದು ಹೇಳಲಾಗುವುದಿಲ್ಲ. ಮೂರ್ಖವಲ್ಲ, ಕಾಂಗ್ರೆಸ್ಸಿನ ವಿರೋಧ ಪಕ್ಷದವರಿಗೆ ಕಾಂಗ್ರೆಸು ಮುಂದೇನು ಮಾಡುವದೆಂಬುದನ್ನು ಈಗಲೇ ತಿಳಿಸುವುದು ಉಚಿತವೂ ಅಲ್ಲ.

ಆದರೆ ಈ ವಿಚಾರವಾಗಿ ಕಾಂಗ್ರೆಸಿನವರು ದೇಶದಲ್ಲಿ ಬೇಕಾದಂತೆ ಚರ್ಚೆ ನಡೆಸಬಹುದೆಂದು ತೀರ್ಮಾನಿಸಿದ್ದು ಕೆಲವರ ಆಕ್ಷೇಪಗಳನ್ನು ಪರಿಹರಿಸಲು ಸಹಾಯಕರವಾಗದಿರದು. ಇನ್ನು ನಾಲ್ಕು ತಿಂಗಳುಗಳ ವರೆಗೆ ದೇಶದಲ್ಲಿ ಈ ವಿಷಯ ಚೆನ್ನಾಗಿ ಶೋಧಿಸಿ, ಚರ್ಚಿಸಿ, ಲಕ್ನೌ ಕಾಂಗ್ರೆಸಿನಲ್ಲಿ ತಮ್ಮ ತೀರ್ಮಾನವನ್ನು ಕೊಡಲು ಅನುಕೂಲವಾಗಿದೆ.

ಸಂಸ್ಥಾನ ಪ್ರಜೆಗಳಿಗೂ, ಕಾಂಗ್ರೆಸಿಗೂ ಇರುವ ಸಂಬಂಧವನ್ನು ಕುರಿತ ತರಾವೇ ಅಲ್ಲಿ ತೀರ್ಮಾನವಾದ ಇನ್ನೊಂದು ಮುಖ್ಯ ವಿಷಯ. ಸಂಸ್ಥಾನಗಳ ಪ್ರಜೆಗಳ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಸಭೆಗೆ ಪೂರ್ಣ ಸಹಾನುಭೂತಿ ಇದೆ, ಆದರೆ ಅದು ಸಾಲದು; ಅವರ ಹೋರಾಟವನ್ನು ಕಾಂಗ್ರೆಸ್ಸಿನ ಕಾರ್ಯಕ್ರಮಕ್ಕೆ ಸೇರಿಸಿಕೊಳ್ಳಬೇಕೆಂದು ಕೆಲವರ ವಾದವಾಗಿದೆ. ಹೀಗೆ ಸೇರಿಸುವುದರಿಂದ ಸಂಸ್ಥಾನಿಕರ ಹಿತವನ್ನೇನೂ ಸಾಧಿಸಿದಂತಾಗುವುದಿಲ್ಲ. ಯಾಕೆಂದರೆ ಕಾಂಗ್ರೆಸಿನ ಕಾರ್ಯಕಾರಿ ಮಂಡಳಿಯು ಈಗ ಆ ಕೆಲಸವನ್ನು ಕೈಗೊಳ್ಳುವ ಸ್ಥಿತಿಯಲ್ಲಿಲ್ಲ. ಇದರಿಂದ ಪ್ರಯೋಜನವಾಗುವುದರ ಬದಲು ಈಗ ಇಲ್ಲದೆ ಇರುವಂಥ ತೊಂದರೆಗಳನ್ನು ಉಂಟುಮಾಡಿಕೊಂಡಂತಾಗಬಹುದು. ಅಲ್ಲದೆ ಇದೂ ಒಂದು ಸಾಧಾರಣದ ವಿಷಯವಲ್ಲ. ಮಹಾ ಸಭೆಯುವದೇ ತೀರ್ಮಾನಿಸುವಷ್ಟು ಮಹತ್ವವು ಇದಕ್ಕೂ ಇದೆ. ಆದುದರಿಂದ ಕಾಂಗ್ರೆಸ್ ಕಮಿಟಿಯವರು ಈ ವಿಚಾರದಲ್ಲಿ ಬದಲಾವಣೆಗಳನ್ನೇನೂ ಒಪ್ಪಿಕೊಳ್ಳದೆ, ಲಕ್ನೌ ಸಭೆಯ ಆಲೋಚನೆಗೆ ಬಿಟ್ಟದ್ದು ಯೋಗ್ಯವೂ, ಜನ ಸಮ್ಮತವೂ ಆಗಿದೆ.

ತಲಕಾವೇರಿ ಜಾತ್ರೆ.

ಈ ತಿರೋನಾಮೆಯ ಬಾತ್ಮಿಯೊಂದು ಇನ್ನೊಂದು ಕಡೆ ಪ್ರಕಟವಾಗಿದೆ. ಅದರಲ್ಲಿ ಸೂಚಿಸಿರುವ ಎರಡು ಸಂಗತಿಗಳು ಮುಖ್ಯವಾದವಾಗಿವೆ. ಕೊಡಗಿನಲ್ಲಿ ಯಾಕೆ ದಕ್ಷಿಣ ಹಿಂದೂಸ್ಥಾನದಲ್ಲೇ ಅತಿ ಪವಿತ್ರ ಸ್ಥಳವೆನ್ನಿಸಿಕೊಂಡಿರುವ ತಲಕಾವೇರಿಗೆ ಹೋಗುವ ದಾರಿಯನ್ನು ಬಹು ಹೀನಸ್ಥಿತಿಯಲ್ಲಿಟ್ಟುಕೊಂಡಿರುವುದಷ್ಟೆ, ಯಾತ್ರಿಕರಿಗೆ ಮಳೆಗಾಳಿಯಲ್ಲಿ ರಾತ್ರಿವೇಳೆ ಉಳಕೊಳ್ಳಲು ಬೇಕಾದ ಅನುಕೂಲತೆಯೆನ್ನು ಮಾಡಿ ಕೊಡದೆ ಇರುವುದೂ ಕೊಡಗಿನ ಮುಜರ್ಯಾಯಿ ಇಲಾಖೆ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಪ್ರಾಂತೀಕ ಸರ್ಕಾರದವರಿಗೆ ಭೂಷಣವಲ್ಲ. ಬೇರೆ ಪ್ರಾಂತ್ಯಗಳಲ್ಲೆಲ್ಲಾ, ಜನ ಸಂದಣಿಯು ಅಗತ್ಯವೆನ್ನಿಸುವ ಸ್ಥಳಗಳಿಗೆ ಪ್ರಯಾಣದ ಮತ್ತು ವಸತಿಯ ಅನುಕೂಲತೆಗಳು ಹೆಚ್ಚೆಚ್ಚಾಗಿ ಮಾಡಲ್ಪಡುತ್ತಿರುವಾಗ್ಯೆ ನಮ್ಮ ಪ್ರಾಂತ್ಯದಲ್ಲಿ ಸಂಬಂಧಪಟ್ಟ ಇಲಾಖೆಯವರು ಪುಣ್ಯಕ್ಷೇತ್ರ ವಿಷಯದಲ್ಲೂ ಕೂಡ ಉದಾಸೀನತೆಯಿಂದ ವರ್ತಿಸುತ್ತಿರುವುದು ಶೋಚನೀಯವಾಗಿದೆ. ಇನ್ನಾದರೂ ಅವರು ಈ ಕೊರತೆಗಳನ್ನು ಹೋಗಲಾಡಿಸುವರೇ?

ಅ. ಭಾ. ಕಾಂಗ್ರೆಸ್ ಕಮಿಟಿ ಮೀಟಿಂಗು.

ಅಧಿಕಾರ ಸ್ವೀಕಾರದ ತೀರ್ಮಾನ ಕಾಂಗ್ರೆಸ್ ಮಹಾ ಸಭೆಗೆ ಬಿಡಲಾಯಿತು.

ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಮೀಟಿಂಗು.

ಈ ತಾ. 15 ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ಮದ್ರಾಸಿನಲ್ಲಿ ಸೇರಿತು: ಶ್ರೀ ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದರು. ಶ್ರೀಮತಿ ಸರೋಜಿನಿದೇವಿ, ಸರ್ದಾರ್ ಪಟೇಲ್, ಕೆ. ಯಫ್. ನರೀಮನ್, ಡಾ. ಪಟ್ಟಾಭಿಸೀತಾರಾಮಯ್ಯ, ಸೇಟ್ ಜಮ್ನಲಾಲ್ ಬಜಾಜ್, ಜಯರಾಮದಾಸ್ ದೌಲತರಾಮ್ (ಜನರಲ್ ಸೆಕ್ರೆಟರಿ) ಗಂಗಾಧರರಾವ್ ದೇಶಪಾಂಡೆ, ಸೌರೆಂದ್ರ ಮೋಹನ್ ಮೊಯಿತ್ರ ಮತ್ತು ಆಚಾರ್ಯ ಕೃಪಾಲಿನಿ (ವರ್ಕಿಂಗ್ ಜನರಲ್ ಸೆಕ್ರೆಟರಿ) ಇವರು ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ ಸಿ. ವಿಜಯ ರಾಘವ ಚಾರ್ಯರೂ, ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಶ್ರೀ ಭುಲಾಭಾಯಿ ದೇಸಾಯಿಯವರೂ ಆಹ್ವಾನಿತರಾಗಿ ಬಂದಿದ್ದರು.

ಈ ಸಮಿತಿಯ ಮೂರು ದಿನಗಳ ಮೀಟಿಂಗಿನಲ್ಲಿ ತೀರ್ಮಾನಿಸಲ್ಪಟ್ಟ ಮುಖ್ಯ ಸಂಗತಿಗಳು ಯಾವವೆಂದರೆ:—ಕಾಂಗ್ರೆಸ್ಸಿನ ಆದಾಯ ವೆಚ್ಚದ ಲೆಕ್ಕ, ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳ ವರದಿಗಳ ಪರಿಶೀಲನೆ, ಕಾಂಗ್ರೆಸಿನ ಸ್ವರ್ಣಮಹೋತ್ಸವ ಆಚರಿಸುವ ಕ್ರಮ, ಆ ಕಾಲದಲ್ಲಿ ಕಾಂಗ್ರೆಸಿನ ಇತಿಹಾಸವನ್ನು ಪ್ರಕಟಿಸುವ ವಿಷಯ.

ಬರುವ ಸುಧಾರಣೆಯ ಕೌನ್ಸಿಲುಗಳಲ್ಲಿ ಮಂತ್ರಿಪದವಿಗಳನ್ನು ಸ್ವೀಕಾರ ಮಾಡಲು ಇನ್ನೂ ಕಾಲಬಂದಿಲ್ಲ; ಅದನ್ನು ಲಕ್ನೌ ಕಾಂಗ್ರೆಸ್ಸಿನ ತೀರ್ಮಾನಕ್ಕೆ ಬಿಡಕ್ಕದೆಂದು ನಿಶ್ಚಯಿಸಲಾಯಿತು.

ಸಂಸ್ಥಾನ ಪ್ರಜೆಗಳ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸಿನವರು ಈ ಮೊದಲಿನಂತೆಯೇ ವರ್ತಿಸುವುದು ಉಚಿತವೆಂದು ತೀರ್ಮಾನಿಸಲಾಯಿತು.

ಆಂಧ್ರ—ಕರ್ನಾಟಕ ಗಡೀ ಪ್ರಶ್ನೆಯನ್ನು ತೀರ್ಮಾನಿಸಲು ನಿರ್ಮಿಸಿದ ಸಮಿತಿಯವರ ಸಲಹೆಯಂತೆ, 'ಒಳ್ಳಾರಿ ಜೀಯ ಅದೋನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳು ಈಗಿರುವಂತೆ ಆಂಧ್ರ ಪ್ರಾಂತೀಕ ಕಾಂಗ್ರೆಸ್ ಕಮಿಟಿ ಸೇರಿರತಕ್ಕದ್ದು; ಗಡೀ ವಿವಾದದ ತೀರ್ಮಾನವನ್ನು ಮುಂದಕ್ಕಿಡತಕ್ಕದ್ದು; ಬಳ್ಳಾರಿ ಜಿಲ್ಲೆಯಿಂದ ಕೌನ್ಸಿಲು ಮತ್ತು ಶಾಸನೀಯ ಸಂಸ್ಥೆಗಳ ಚುನಾವಣೆಗೆ ಉಮೇದುವಾರರುಗಳನ್ನು ನಿಲ್ಲಿಸಲು ಇಬ್ಬರು ಆರ್ಧ್ರ ಮತ್ತು ಮೂವರು ಕನ್ನಡಿಗ ಪ್ರತಿನಿಧಿಗಳುಳ್ಳ ಪಾರ್ಲಿಮೆಂಟರಿ ಬೋರ್ಡನ್ನು ಸ್ಥಾಪಿಸತಕ್ಕದ್ದು ಮತ್ತು ಬಳ್ಳಾರಿ ಆಂಧ್ರ ಡಿಸ್ಟ್ರಿಕ್ಟ್ ಕಮಿಟಿಯೂ ಆ ವರೆಗೆ ಒಳ್ಳಾರಿ ಜಿಲ್ಲೆಯ ಆಂಧ್ರ ಆರ್ಗನೈಸೇಷನ್ ಬಳ್ಳಾರಿಯಲ್ಲೇ ಆಫೀಸು ಮಾಡಬಹುದು' ಎಂದು ತೀರ್ಮಾನಿಸಲಾಯಿತು.

ಬಂಗಾಳ ಪ್ರಾಂತೀಕ ಕಾಂಗ್ರೆಸು ಕಮಿಟಿಯು ವಿವಾದವನ್ನು ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಬಂಗಾಳ ಪ್ರಾ. ಕಾ. ಕಮಿಟಿಯ ಎಗ್ಸಿಕ್ಯುಟಿವ್ ಕೌನ್ಸಿಲಿನವರು ಜಾರಿಗೆ ತಾರದ್ದಕ್ಕೆ 'ಸದರಿ ಕೌನ್ಸಿಲಿನ ವಿವರಣೆಯನ್ನು ಕೇಳುವಂತೆ ತೀರ್ಮಾನಿಸಲಾಯಿತು.

ಅ. ಭಾ. ಕಾಂಗ್ರೆಸ್ ಕಮಿಟಿ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗು ಈ ತಾ. 17 ಮತ್ತು 18 ರಲ್ಲಿ ಮದ್ರಾಸಿನಲ್ಲಿ ನಡೆಯಿತು. ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದರು. ಕಮಿಟಿಯ 165 ಸದಸ್ಯರ ಪೈಕಿ 54 ಮಂದಿ ಹಾಜರಿದ್ದರು. ತಮಿಳುನಾಡು ಮತ್ತು ಆಂಧ್ರದ ಮೆಂಬರುಗಳೇ ಹೆಚ್ಚಾಗಿ ಬಂದಿದ್ದರು.

ಹಿಂದಿನ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಒಪ್ಪಿದ ಮೇಲೆ ಅ. ಭಾ. ಕಾಂಗ್ರೆಸ್ ಕಮಿಟಿಯ ಮೀಟಿಂಗುಗಳನ್ನು ನಡಿಸಲು ವರ್ಕಿಂಗ್ ಕಮಿಟಿಯವರು ತಯಾರಿಸಿದ್ದ ನಿಬಂಧನೆಗಳು ಸ್ವಲ್ಪ ಕಾಲದ ಚರ್ಚೆಯಿಂದ ಮಂಜೂರುಮಾಡಲ್ಪಟ್ಟವು.

ಅಧಿಕಾರ ಸ್ವೀಕಾರದ ವಿಷಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪಾಸುಮಾಡಿದ್ದ ಈ ಕೆಳಗಿನ ತರಾವನ್ನು ಆಚಾರ್ಯ ಕೃಪಾಲಿನಿಯವರು ಸಭೆಯ ಮುಂದಿಟ್ಟರು.

'ಮುಂದೆ ಪ್ರಾಂತ್ಯಗಳಲ್ಲಿ ಮಹಾ ಚುನಾವಣೆಗಳ್ಳಾಗಬೇಕಾದರೆ ದೀರ್ಘಕಾಲಬೇಕು. ಈ ದೀರ್ಘಕಾಲದಲ್ಲಿ ರಾಜಕೀಯ ಸ್ಥಿತಿಗಳೇನಾಗುವವೋ ಹೇಳಲಾಗುವುದಿಲ್ಲ. ಎಲ್ಲವೂ ಅನಿಶ್ಚಿತವಾಗಿದೆ. ಆದುದರಿಂದ ವರ್ಕಿಂಗ್ ಕಮಿಟಿಯ ಅಭಿಪ್ರಾಯದಲ್ಲಿ ಸದ್ಯಕ್ಕೆ ಅಧಿಕಾರ ಸೂತ್ರಗಳನ್ನು ನಹಿಸಬೇಕೋ, ಬೇಡವೋ ಎಂಬ ಪ್ರಶ್ನೆಯನ್ನು ನಿರ್ಣಯ ಮಾಡುವುದೇ ಸೂಕ್ತವಲ್ಲ, ರಾಜನೀತಿಯಲ್ಲ. ಆದ ಕಾರಣ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಮಾಡಿದ ತೀರ್ಮಾನವನ್ನೇ ಪುನಃ ಮಂಜೂರು ಮಾಡುತ್ತಾದೆ. ಆದರೆ ಈ ವಿಷಯವು ದೇಶದಲ್ಲಿ ಚರ್ಚೆ ನಡಿಸಲು ಅಡ್ಡಿ ಇಲ್ಲ.'

ಶ್ರೀ ನರೇಮನರು ಅನುಮೋದಿಸಿದ ಈ ಗೊತ್ತುವಳಿಗೆ ಪರವಾಗಿ ಮೆ. ಎನ್. ವಿ ಗಾಡ್ಗಿಲ್‌ರವರು, ಮೆ. ಯಸ್. ಸತ್ಯಮೂರ್ತಿಯವರು, ಸ್ವಾಮಿ ಗೋವಿಂದಾನಂದ ಮೊದಲಾದವರು ಮಾತಾಡಿದರು.

ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ಇಲ್ಲಿ ಚರ್ಚಿಸಿ ಆಗುವ ತೀರ್ಮಾನವನ್ನು ಕಾಂಗ್ರೆಸಿನ ಹುಗುಂದಿಡಬೇಕೆಂಬ ಉಪ ತರಾವನ್ನು ಶ್ರೀ ಟಿ. ಪ್ರಕಾಶಂರವರು ಸೂಚಿಸಿ ಭಾಷಣ ಮಾಡಿದರು. ಮೆ. ಕಾಳೇಶ್ವರರಾಯರು ಅನುಮೋದಿಸಿದ ಮೇಲೆ, ಇದಕ್ಕೆ ಪರವಾಗಿ ಮೆ. ಟಿ. ವಿಶ್ವನಾಥನವರು, ಮಾತಾಡಿದರು. ಓಟಿಗೆ ಪಾಕಲಾಗಿ ಉಪ ತರಾವು ಸೋಲಿಸಲ್ಪಟ್ಟಿತು. ವರ್ಕಿಂಗ್ ಕಮಿಟಿಯ ತರಾವು ದೊಡ್ಡ ಬಹುಮತದಿಂದ ಮಂಜೂರಾಯಿತು.

ನಂತರ ಸರ್ದಾರ ವಲ್ಲಭಭಾಯಿ ಪಟೇಲರು—ಸಂಸ್ಥಾನಗಳ ಪ್ರಜೆಗಳಿಗೂ ಕಾಂಗ್ರೆಸಿಗೂ ಇರುವ ಸಂಬಂಧವನ್ನು ಕುರಿತು ವರ್ಕಿಂಗ್ ಕಮಿಟಿಯವರು ನೂಡಿದ ಈ ಕೆಳಗಿನ ಸಾರಾಂಶದ ತರಾವನ್ನು ಸಭೆಯ ಮುಂದಿಟ್ಟರು.

'ಸಂಸ್ಥಾನ ಪ್ರಜೆಗಳ ಸ್ವಾತಂತ್ರ್ಯ ಹೋರಾಟಕ್ಕೆ ಕಾಂಗ್ರೆಸಿನ ಸಂಪೂರ್ಣ ಸಹಾನುಭೂತಿ ಇದ್ದರೂ ಪ್ರಕೃತ ರಾಜಕೀಯ ಪರಿಸ್ಥಿತಿಯಲ್ಲಿ ಅದನ್ನು ಕಾಂಗ್ರೆಸ್ಸಿನ ಪ್ರತ್ಯಕ್ಷ ಕಾರ್ಯಕ್ರಮದಲ್ಲಿ ಸೇರಿಸುವುದರಿಂದ ಸಂಸ್ಥಾನ ಪ್ರಜೆಗಳ ಯಾವ ಹಿತವನ್ನೂ ಸಾಧಿಸಿದಂತಾಗುವುದಿಲ್ಲ ಮಾತ್ರವಲ್ಲ, ಇಲ್ಲದ ತೊಡಕನ್ನು ಉಂಟುಮಾಡಿಕೊಂಡಂತಾಗುತ್ತದೆ.'

ಈ ಗೊತ್ತುವಳಿಗೆ ಮೆ. ವೆಂಕಟರ ಅಲಿಯವರು ಕೆಲವು ಬದಲಾವಣೆಗಳನ್ನೊಳಗೊಂಡ ಉಪಸೂಚನೆಯನ್ನು ಮಾಡಿದರು. ಇದರ ಮೇಲೆ ದೀರ್ಘ ಚರ್ಚೆ ನಡೆದು ಉಪಸೂಚನೆಯು ಸೋಲಿಸಲ್ಪಟ್ಟಿತು. ವರ್ಕಿಂಗ್ ಕಮಿಟಿಯ ತೀರ್ಮಾನದ ತರಾವು ಬಹು ಮತದಿಂದ ಮಂಜೂರಾಯಿತು.

ವಿದೇಶಗಳಲ್ಲಿ ಭಾರತ ಪ್ರಚಾರವನ್ನು ಸಾಕಷ್ಟು ಹುರುಪಿನಿಂದ ನಡಿಸುವ ಏರ್ಪಾಡು ಮಾಡಬೇಕೆಂಬ ತರಾವು ಪಾಸಾದ ಮೇಲೆ ಮೀಟಿಂಗು ಬರ್ಕಾಸ್ತಾಯಿತು.

---

pplement to this Issue.

THE
POPULAR INSURANCE COMPANY,
LIMITED

FIRST VALUATION REPORT

FOR THE QUINQUENNIUM

ENDING 31ST DECEMBER 1934

BY THE CONSULTING ACTUARY

G. S. MARATHEY, Esq., M. A., (Bom.) A. I. A. (Lon.)

POONA

HEAD OFFICE:

MANGALORE, S. INDIA

Press, Ltd., Mangalore.

The Shareholders of the Popular Insurance Co., Lt

MANGALORE.

GENTLEMEN,

The Directors have great pleasure to submit for your adoption the report of the A in connection with the First Quinquennial Valuation of the Assets and Liabilities of the Cor for the period ending 31st December, 1934.

You are aware of this being the Company's First Valuation after 5 years of progress and will note from the accompanying Actuarial report that, as a result of the Valu we have been able to declare a uniform bonus of Rupees Ten per annum per thousan assured, for both the Whole Life and Endowment policies, to the participating policyholder are sure you will find the results to be most satisfactory. Very few Indian Life Offices shown a divisible surplus at their very First Valuation; and, in our case, it is possible only on account of our economic and sound policy. We have been able to achiev record and, therefore, can take pride in the fact that ours is the only Life Office on this si the Presidency and in the whole of British Karnataka that is able to declare a bonus so hi Rs. 10/- per thousand per annum at the very First Valuation.

Since the Valuation has disclosed a surplus of Rs. 13,240/-, the Actuary has re mended it, in conformity with our Articles of Association, for distribution as follows:—

Transfer to Life Assurance Reserve Fund as per Article No. 153	Rs.
Provision for dividend at 5% on the Paid-up Share Capital on 31—12—34 for the two years 1933 & 1934 only . . .	Rs. 2;
Provision for Reversionary Bonus at the rate of Rs. 10/-- per Rs. 1,000/-- sum assured for every year's premium paid or to be paid in respect of participating policies in force on the date of Valuation	Rs. 10,;
Balance carried forward unappropriated to the credit of policyholders	Rs.
TOTAL AMOUNT	Rs. 13,;

As per Article 153, we have to set apart a portion of the amount of the surplus disc at a Valuation towards the opening and building up of a "Life Assurance Reserve Fund" it is, therefore, recommended that a sum of Rs. 200/- be allocated towards that Fund. Ou the remaining surplus of Rs. 13,040/- of our First Valuation, the shareholders' share sh not under the Articles exceed 20%; and, consequently, a sum of Rs. 2436/- is proposed t utilised to declare a dividend of 5% free of Income-Tax, to each share for the two years 1933 1934 only, for the Valuation period. A balance of Rs. 10,604/- is thus made available for d bution among the policyholders. The Directors recommend that a Simple Reversionary B of Rs. 10/- per thousand sum assured per annum for each of the 5 years, be declared t participating policies as recommended by the Actuary; and, as this would require only a sur Rs. 10,321/-, the balance in surplus of Rs. 283/- may be carried over to the credit of the po holders unappropriated.

The Directors have much pleasure to invite your special attention to the concluding of the Actuary's report with reference to the two favourable features, "which will help ompany in its progress". The First is that the Government Securities held by the ny have shown an appreciation as at 31—12—1934 of Rs. 9,000/- or about 25% of the cost nd even now continues to enhance in such appreciation. No credit has been taken of this iation either in the Valuation or the Balance Sheet as at 31—12—1934; and hence the ny does possess a comparatively very strong **hidden reserve.** The other feature is that lance Sheet is free of any "intangible assets such as expenses treated as assets which sort of burden hampering progress" and on account of this, the financially sound n of the Company is amply strengthened and well established.

In concluding this report, your Directors feel it their pleasant duty to place on record irty support and co-operation received hitherto from yourselves, the Agents and Staff of mpany, and also from the insuring public; and it is their sincere belief that, with the ation of the exceedingly favourable results of this Valuation, the business of the Company urely show a rapid and continued increase, thus enabling the Company to achieve and still more favourable results at the time of the next Valuation. We, therefore, appeal f you, Shareholders, individually and collectively, to take a greater interest in the Company the years to come by insuring your lives still further and also by recommending the ny to your friends and relations and to all others you come in contact with and ute to the further prosperity of this, the **Pioneer Life Office of the West Coast.**

Yours faithfully,

angalore;
ugust 1935.

W. E. Mascarenhas,
Chairman,
On behalf of Board of Directors.

RILLIANT FIRST VALUATION RECORD!

A BONUS OF Rs. 50 PER 1000/-

DECLARED ON ALL PARTICIPATING POLICIES FOR THE QUINQUENNIUM ENDING 31ST DECEMBER 1934.

INSURE WITH

The "POPULAR" The Pioneer Life Office of the West Coast.

Applications for Agencies are invited from gentlemen of position & influence in unrepresented areas.

Liberal Terms to Earnest Workers.

Full particulars on application to the Head Office.

I recommend that dividend on shares and reversionary bonus at the above rates to pating policies in force on the date of the valuation be granted on the strength of the on surplus. Considering that your Company is one of five years' standing only, this e considered a satisfactory result. The relatively large volume of business secured by you the last year of the Valuation period, without incurring a heavier expense ratio, indicates eased popularity and capacity, and if you meet with the same success hereafter, you can ly show better results at the time of the next Valuation.

There are two features which will help you in your progress. The first is a hidde in the form of the appreciation in the market values of your securities, forming the asse r Life Assurance Fund, over the cost price, which is not a small amount relatively, and f credit has not been taken in your Balance Sheet. The second is that your Balance She r of any intangible assets such as expenses treated as assets, which form a sort of burde ring progress. These two features indicate your preference for soundness over spectacul s, which is very commendable.

I have to congratulate you, therefore, upon the result of the Valuation and hope th Company will soon be a matter of great credit to your province by achieving a definit g among progressive Indian Life Offices.

I beg to remain,
Gentlemen,
Yours faithfully,

Poona No. 4.
2nd August 1935.

G. S. Marathey

The Popular Insurance Co., Ltd., Mangalore.

FOURTH SCHEDULE.

1. The Valuation has been made as on 31st December 1934.

2. Whole Life policies were grouped for valuation according to the age attained. Whole Life Limite ents were valued by Karup's method and the special reserve for expenses after the premiums cease wa lated as a deferred annuity. Endowment Assurances were grouped according to the number of premium anding the average age for each group being found by Lidstone's method. Children's simple Endowmen es were valued by accumulation of premiums. All other classes of policies were valued individually. Extr iums have been entirely reserved to meet the Extra risk. These principles have been determined by me.

3. The table of mortality used was the OM (5) Table for an age higher by six years than the real age i ase of Whole Life policies and by five years in the case of other classes. The addition to age in the case o upee policy classes is 10 years.

4. The rate of interest assumed is 4¼%.

5. The proportion of premiums reserved for future expenses and profits is 22% in the case of with profi es, 19% in the case of without profit policies and 25% in the case of the Rupee Policy classes.

6 & 7. Statements are attached herewith.

8. According to the Articles of Association, a portion of the surplus, to be determined by the Directors i ultation with the Actuary, has to be first set apart towards the "Life Assurance Reserve Fund". The remaining ns is allocated between policy-holders and share-holders so that the share of the latter does not exceed 20% s surplus.

9. (i) The valuation has disclosed a surplus of Rs. 13,240 which is recommended for dis
bs:-

Among Shareholders	...	Rs.	2,436
,, 827 participating policies insuring Rs. 8,92,750/-	... ...	,,	10,321
Transfer to Life Assurance Reserve Fund as per Article No. 153	...	,,	200
To be carried forward unappropriated		,,	283
		Total ,,	13,240

(ii) Bonus recommended is uniform reversionary at the rate of Rs. 10/- per Rs. 1000/- sum for every year's premium paid or due to be paid up to the date of the Valuation in respect of participating in force on the date of the Valuation. The statement of specimen cash values of bonus is attached herewi

FIFTH SCHEDULE.

1. Published tables of premium rates are attached herewith.
2, 3, 4, 5 & 6. Statements are attached herewith.
7, 8 & 9. No such policies have been issued.

10. There are no reversionary investments. The average yield on the total investments if ca on the mean Life Assurance Fund only comes out to be 20·01%, 13·81%, 9·82% and 6·51% for the ye 1932, 1933 and 1934 respectively. The Life Assurance Fund for the year 1930 was very small.

11. Surrender values are allowed after at least three years' premiums have been paid. The minimum guarantee. The statement under the Indian Life Insurance Companies Rule 6 (i) of 1930, h prepared on the assumption of a minimum guarantee of 40% of the premiums after the 1st year's.

Statement Under The Indian Life Insurance Companies Rules of 1930.

6. (a) The calculations have been made, under my own supervision on the principles mentioned statement under the Act, and every care has been taken to see that they are correct.
(b) These principles have been adopted by me as most suitable
(c) All necessary information has been obtained.
(d) Premiums receivable in the first half, and in the second half of the year were valued by an due and immediate respectively. Outstanding instalments of the annual premiums were added to the values gross premiums. Premiums were valued by continuous annuities in the case of the Rupee Policy classes.
(e) The age at Valuation in the case of Whole Life Policies was taken to be the nearest age at th of the valuation. For Endowment Assurances the age at Valuation was derived for each group from the m age, by deducting the nearest integral number of years outstanding.
(f) The Mortality Table used is well-known.
(g) Great care has been taken to eliminate negative values.
(h) The required figures are 48·05/-, 50·24/-, 47·59/- and 23·07/- for the years 1931, 1932 and 1934 respectively.
(i) Statement is attached herewith.

(Please see answer to Schedule V, No. 11.)

7. The Valuation has disclosed a surplus.

G. S. Marath

The Chairman & Board of Directors,

Popular Insurance Co., Ltd.,

MANGALO

GENTLEMEN,

I have the pleasure to enclose herewith the various statements required to be subm the Government of India in connection with the Actuarial Valuation of your Company as December 1934, which you had entrusted to me. The valuation has disclosed a surp Rs. 13,240/- which is a matter for congratulation.

The basis adopted for the valuation is as follows:

MORTALITY—The Table of Mortality used is the O^M (5) Table with an addi the real age of 6 years in the case of Whole Life policies and of 5 years in the case o classes of policies to allow for the inferior mortality of Indian lives. The addition to age case of Rupee policy classes is 10 years.

The rate of interest assumed is 4¼% this being the rate likely to be earned for a n of years to come even on reasonably safe and sound investments judiciously selected.

The provision for future expenses and profits has been made by reserving 22 19% of the office premiums in the case of with profit classes and without profit respectively. For the Rupee policies the provision is 25%. Your renewal expense ratio the year 1934 after allowing the first year's premiums for the first year's expenses, comes be much lower than 19 per cent and it is hoped that you would be able to keep it below cent in the future.

On this basis the valuation has disclosed a surplus of Rs. 13,240/- which I recom for disposal as follows:—

Valuation Surplus	... ...	Rs.	13
Transfer to the Life Assurance Reserve Fund as per Article No. 153	...	,,	2
leaving	... ...	,,	13
Provision for dividend at 5% on the paid-up share capital on 31—12—34 for the two years 1933 and 1934 only.	... ...	,,	2
which leaves for distribution among policy-holders the sum of	...	,,	10
The provision for reversionary bonus at the rate of Rs. 10 per Rs. 1000/- sum assured for every year's premium paid or due to be paid up to the date of the valuation in respect of participating policies in force on the date of the valuation is	... ...	,,	10
leaving to be carried forward unappropriated, the sum of	...	,,	

Schedule IV No. 7.

Summary and Valuation of the Policies as at 31st December, 1934.

ASSURANCES	Particulars of Policies for Valuation				Value by O^{M} (5) Table (modified) at 4¼ % interest			
	No. of Policies	Sum Assured	Office yearly premium	Net yearly premium	Sum assured	Office yearly premium	Net yearly premium	Net Liability
WITH PROFITS								
Whole Life Assurance	37	53000 0	2046 10	1596·4	20964·9	28753·4	22427·7	— 1462·8
Whole Life Limited payments	12	16500 0	747 0	582·7	6406·3	8484·3	6617·8	— 211·5
Endowment Assurance	782	8,24,027 8	42197 8	32914·1	3,95,852·6	4,96,715·5	3,87,438·1	8414·5
Extra Premium	...	... ...	258 3	...	...	...	...	129·1
Total with Profits.	831	8,93,527 8	45,249 5	35,093·2	4,23,223·8	5,33,953·2	4,16,483·6	6869·3
WITHOUT PROFITS								
Whole Life Assurance { Regular	15	29000 0	735 13	596·0	9142·6	11862·3	9608·5	—465·9
Whole Life Assurance { Rupee Policy	14	5197 1	168 0	126·0	1988·6	2509·5	1882·1	106·5
Whole Life Limited Payments	7	6500 0	218 11	177·1	2187·0	2653·2	2149·1	37·9
Endowment Assurance { Regular	42	46960 0	1786 7	1447·0	20410·7	23469·1	19010·0	1400·7
Endowment Assurance { Rupee Policy	25	6168 7	300 0	225·0	2953·4	3542·7	2657·0	296·4
Double Endowment	1	1000 0	58 15	47·7	772·7	775·0	627·8	144·9
Children's Marriage Endowment	11	14500 0	910 6	737·4	8129·0	8534·5	6912·9	1216·1
Simple Children's Endowment	5	4500 0	321 4	260·3	—	—	—	1223·4
Threefold Benefit Policy	3	2750 0	155 2	125·7	1880·9	1910·8	1547·7	333·2
Joint Life Endowment	15	28000 0	1804 12	1461·9	15680·7	18525·6	15005·7	675·0
Extra Premium		... ...	137 4	...	...	...	...	68·6
Total without Profits	138	1,44,575 8	6596 10	5204·1	63145·6	73782·7	59400·8	5036·8
Total Assurances	969	10,38,103 0	51845 15	40297·3	4,86,369·4	6,07,735·9	4,75,884·4	11906·1
Deduct Reassurances	1	3000 0	101 4	79·0	1116·8	1561·5	1218·0	—101·2
Net Amount of Assurances	969	10,35,103 0	51744 11	40218·3	4,85,252·6	6,06,174·4	4,74,666·4	12007·3
For Elimination of Negative Values								19789·9
Reserve for future expenses for Paid-up Policies								73·6
Reserve for Surrender Values in excess of Reserve Values								5000·0
							Total Net Liability.	**36870·8**

Negative quantities are indicated by a minus sign.

G. S. Marathey.

THE POPULAR INSURANCE CO., LTD.

VALUATION AS AT 31ST DECEMBER 1934.

Schedule V. No. 2 & 3.

Whole Life Assurance—with & without Profits.

on	Sum Assured	Office Premium		Extra Premium		Valuation Age	Sum Assured	Office Premium		Extra Premium	
	Rs.	Rs.	As.	Rs.	As		Rs.	Rs.	As.	Rs.	As.
WITH PROFITS											
	1000	24	15	—		44	4000	182	12	—	—
	1000	24	15	—		45	4500	218	10	—	—
	2000	51	2	—		47	3500	179	11	—	—
	2000	52	7	—		48	2000	106	14	—	—
	1500	41	0	—		51	1500	93	14	—	—
	2000	53	12	—		52	1000	57	13	—	—
	1500	44	12	—							
	1000	31	10	—							
	2000	65	4	—							
	1500	45	5	—							
	2000	52	6	—							
	2000	62	5	—							
	1500	44	12	—							
	1000	31	10	—							
	2000	65	4	—							
	1500	45	5	—							
	2000	52	6	—							
	2000	62	5	—							
	1500	44	12	—							
	1000	31	10	—							
	2000	65	4	—							
	1500	45	5	—							
	2000	52	6	—							
	2000	62	5	—							
	1000	34	11	—							
	5000	185	0	—							
	2000	84	14	—							
	2000	83	7	—							
	1500	66	15	—							
WITHOUT PROFITS											
						21	1000	20	1	—	—
						22	4500	92	9	—	—
						23	5000	105	10	—	—
						24	3000	65	1	—	—
						25	3000	65	1	—	—
						29	3500	87	15	—	—
						32	1000	27	12	—	—
						36	6000	191	4	—	—
						40	1000	34	8	—	—
						45	1000	46	0	—	—

Whole Life Assurance by Limited Payments.

No. of o/s Premiums	WITH PROFITS						WITHOUT PROFITS					
	Sum Assured		Office Premium		Extra Premium		Sum Assured		Office Premium		Extra Premium	
	Rs.		Rs.	As.	Rs.	As.	Rs.		Rs.	As.	Rs.	As.
10	1000		66	7	.	.	500		43	12	—	—
11	500		32	6	.	.	1000		30	5	—	—
14	1000		70	1	.	.	1000		30	5	—	—
15	4000		180	12	.	.	1000		31	9	—	—
19	4000		184	0	.	.	2000		59	2	—	—
24	5000		183	0	.	.	1000		23	10	—	—
29	1000		30	6	.	.						

Whole Life Assurance—Rupee Policies Without Profits.

uation Age	Sum Assured		Office Premium		Extra Premium		Valuation Age	Sum Assured		Office Premium		Extra Premium	
	Rs.	As.	Rs.	As.	Rs.	As.		Rs.	As.	Rs.	As.	Rs.	As.
24	483	3	12	.	.	.	34	357	15	12	.	.	.
25	940	14	24	.	.	.	38	345	7	12	.	.	.
30	815	14	24	.	.	.	39	594	4	24	.	.	.
31	432	15	12	.	.	.	42	263	13	12	.	.	.
32	765	14	24	.	.	.	52	196	14	12	.	.	.

G. S. Marathey.

The Popular Insurance Co., Ltd.

VALUATION AS AT 31st DECEMBER 1934.

Schedule V No. 4.

ENDOWMENT ASSURANCE WITH AND WITHOUT PROFITS.

Maturity Year	Sum Assured Rs.	As.	Office Premium Rs.	As.	Extra Premium Rs.	As.
WITH PROFITS						
1941	500		59	11	—	—
1942	2000		240	4	—	—
1943	3000		269	0	—	—
1944	20500		1860	7	25	—
1945	10000		798	2	—	—
1946	18000		1328	6	2	8
1947	18000		1369	7	2	8
1948	28500		1985	11	10	—
1949	58750		4034	6	18	12
1950	23500		1391	9	17	8
1951	32500		1822	6	21	—
1952	34500		1885	4	20	—
1953	44500		2396	2	20	—
1954	129250		6772	11	27	5
1955	28500		1377	13	—	—
1956	30000		1328	9	2	10
1957	20500		945	2	—	—
1958	30790		1298	5	19	—
1959	117500		4975	11	9	12
1960	23500		920	1	11	2
1961	24000		889	14	3	10
1962	21000		764	4	40	—
1963	8737	8	296	12	—	—
1964	54000		1877	5	2	8
1965	7000		232	0	—	—
1966	9500		305	0	—	—
1967	8500		272	15	—	—
1968	3500		106	2	—	—
1969	6500		196	4	—	—
1971	3500		102	2	—	—
1972	1500		41	4	—	—
1973	1000		27	12	5	
1974	1000		26	15	—	
WITHOUT PROFITS						
1945	960		PAID UP			
1948	1500		102	5	—	
1949	1500		67	3	2	
1950	2500		139	12	—	
1953	2000		95	7	—	
1954	5000		237	13	4	
1955	2000		93	14	—	
1956	1500		60	5	—	
1958	4000		163	1	—	
1959	5500		217	8	—	
1961	1000		33	1	—	
1962	5000		175	15	—	
1964	5000		153	0	—	
1965	500		15	10	—	
1966	2000		54	5	—	
1968	1500		39	11	—	
1970	2000		51	8	—	
1971	1000		25	6	—	
1972	2000		49	2	—	
1974	500		11	9	—	

ENDOWMENT ASSURANCE—RUPEE POLICY—WITHOUT PROFITS.

Maturity year	Sum Assured Rs.	As.	Office Premium Rs.	As.	Extra Premium Rs.	As.
1942	109	8	12	.	.	.
1944	251	9	24	.	.	.
1945	267	6	24	.	.	.
1946	161	15	12	.	.	.
1947	150	13	12	.	.	.
1949	352	6	24	.	.	.
1952	229	12	12	.	.	.
1953	422	8	24	.	.	.
1954	268	8	12	.	.	.
1955	266	4	12	.	.	.
1956	266	4	12	.	.	.
1957	584	3	24	.	.	.
1958	262	9	12	.	.	.
1960	938	8	36	.	.	.
1961	353	2	12	.	.	.
1966	411	1	12	.	.	.
1967	400	6	12	.	.	.
1970	471	13	12	.	.	.

G. S. Marathey.

The Popular Insurance Co., Ltd

VALUATION AS AT 31ST DECEMBER 1934.

Schedule IV No. 6.

Consolidated Revenue Account for the period commencing 10th September 1929 and ending 31st December 1934.

	Rs.	As.	Ps.		Rs.	A
Amount of the Life Assurance fund at the beginning of the period	—	—	—	*Claims paid & outstanding:—*		
				By death	10,500	
				Surrenders	90	
Premiums	1,37,983	12	0	Commission	28,454	
Interest (less Income-tax Rs. 1,052—13—0)	7,811	9	11	Expenses of Management	54,067	
Miscellaneous	652	5	8	Preliminary Expenses written off	1,058	
				Outstanding Premiums written off	1,998	
				Depreciation on furniture & Library	167	1
				Life Assurance Fund at the end of the period	50,110	1
Total...	**1,46,447**	**11**	**7**	**Total...**	**1,46,447**	**1**

Schedule IV No. 7.

Summary and Valuation of the Reassurance Policies as at 31st December 1934.

Reassurances	Particulars of Policies for Valuation				Value by O^M(5) Table (modified) at 4¼ per cent			
	No. of Policies	Sum Assured	Office yearly premium	Net yearly premium	Sum Assured	Office yearly premium	Net yearly premium	Ne Liabil
With Profits								
Endowment Assurance	1	3000 0	101 4	79·0	1,116·8	1,561·5	1,218·0	–101

Schedule IV No. 7.

VALUATION BALANCE SHEET AS AT 31ST DECEMBER 1934.

Dr.	Rs.	As.	Ps.	Cr.	Rs.	A
To, Net Liability under Life Assurance and annuity transactions (as per summary statement provided in the fourth Schedule)	36,870	12	10	By, Life Assurance and annuity funds (as per Balance Sheet under Third Schedule)	50,110	1
To, Surplus	13,239	15	10			
Total...	**50,110**	**12**	**8**	**Total...**	**50,110**	**1**

G. S. Marathey.

THE POPULAR INSURANCE CO., LTD.

VALUATION AS AT 31ST DECEMBER 1934.

SCHEDULE V NO. 5 & 6.

ASSURANCES	Sum Assured	Office Premium		Extra Premium	
WITHOUT PROFITS	Rs.	Rs.	As.	Rs.	As.
Endowment	1000	58	15	.	.
's Marriage Endowment	14500	910	6	.	.
Children's Endowment	4500	321	4	.	.
l Benefit Policy	2750	155	2	.	.
e Endowment	28000	1804	12	130	.

SCHEDULE IV NO. 9 (2)

lues of Uniform Reversionary Bonus at Rs. 50|- per thousand in the case of Whole Life Assurances and Endowment Assurances for the Quinquennium.

Age Attained	Whole Life- Ordinary and by Limited Payments. Cash value		Endowment Assurance PAYABLE AT AGE 45		50		55		60	
	Rs.	As.	Rs.	As.	Rs.	As.	Rs.	As.	Rs.	As.
25	12	6	23	4	19	12	16	13	14	6
30	14	3	27	8	23	4	19	12	16	13
35	16	5	32	10	27	8	23	4	19	12
40	18	12	39	3	32	10	27	8	23	4
45	21	7			39	3	32	10	27	8
50	24	6					39	3	32	10
55	27	8							39	3
60	30	10								

FORM D (RULE 6)

ecimen Policy Reserve Values and minimum Surrender Values for Rs. 1,000|-

No. of Pre-miums paid	Whole Life Assurance (Without Profits) Reserve Value	Minimum Surrender Value	Whole Life 20 payments (Without Profits) Reserve Value	Minimum Surrender Value	Endowment Assurance Maturing at age 55 (Without Profits) Reserve Value	Minimum Surrender Value
	Rs.	Rs.	Rs.	Rs.	Rs.	Rs.
1	—	—	3	—	—	—
2	—	—	19	—	—	—
3	—	16	35	22	8	20
4	1	23	53	32	23	31
5	11	31	71	43	38	41
1	—	—	14	—	8	—
2	—	—	34	—	32	—
3	13	21	55	27	57	30
4	26	31	77	40	82	45
5	40	42	99	53	109	60
1	—	—	20	—	53	—
2	17	—	45	—	101	—
3	36	30	72	35	151	54
4	55	45	98	53	204	81
5	75	60	126	70	259	108

on for the excess of surrender values over the reserve values has been made in the form of a consoli-al reserve as shown in Schedule IV No. 7.

G. S. Marathey.

The Popular Insurance C(

MANGALORE

FIRST

VALUATION REP(

For the Quinquenniu

ending 31st December 1

ಇಟೆಲಿ-ಅಬಿಸೀನಿಯಾ ಯುದ್ಧ.

ಇಟೆಲಿಯನವರು ಆಕ್ಸುಂ ಪಟ್ಟಣದಲ್ಲಿ ತಮ್ಮ ಧ್ವಜವನ್ನೇರಿಸಿದರು.

ರಾಸ್ ಸಯೂಮರ ಅದ್ಭುತ ಸಾಹಸ—ಮುಸೋಲಿನಿಯವರ ಪುತ್ರರು ಮೃತ್ಯುವಿನ ಬಾಯಿಂದ ಪಾರಾದರು

ಒಗಡನ್ ಪ್ರಾಂತ್ಯದಲ್ಲಿ ಪುನಹ ಮಳೆ—ಅಬಿಸೀನಿಯರಿಗೆ ದೈವ ಸಹಾಯ.

ಅಬಿಸೀನಿಯೊಕ್ಕೆ ಯುದ್ಧ ಸಾಮಾನುಗಳ ತಡೆ ತೆಗೆಯಲ್ಪಟ್ಟಿತು.

ಇಟೆಲಿಯವರ ಮುಂದಿನ ದೃಷ್ಟಿ ಮಕೇಲ್ ಪಟ್ಟಣದ ಮೇಲೆ.

ಒಗಡನ್ನಿನಲ್ಲಿ ಭೀಕರ ಕಾಳಗ—ಅಬಿಸೀನಿಯರ ವಿಪರೀತ ನಷ್ಟ.

ಮುಸೋಲಿಯವರು ರಣರಂಗಕ್ಕೆ ಹೋಗುವರೇ?

ಡಾಗ್ನೇಯ ಮೇಲೆ ಧಾಳಿ—ಉತ್ತರದಲ್ಲಿ ಇಟೆಲಿಯವರ ಹಿಂತಿರುಗುವಿಕೆ.

ಪುನಹ ರಾಜಿ ಸಂಧಾನಗಳ ಪ್ರಯತ್ನ.

ಅಕ್ಟೋಬರು ತಾ 15.

ವಿಪರೀತ ಸೈನಿಕರು—ಆಯುಧಗಳಿಲ್ಲ.

ಅಬಿಸೀನಿಯದ ರಕ್ಷಣೆಗಾಗಿ ತಂಡೋಪತಂಡವಾಗಿ ಅಬಿಸೀನಿಯರು ಸೈನ್ಯಕ್ಕೆ ಸೇರಲು ಬರುತ್ತಿರುವರು. ಇವರಿಗೆಲ್ಲ ಆಯುಧಗಳನ್ನೊದಗಿಸಲು ಆಯುಧಗಳೇ ಇಲ್ಲದಿರುವ ಕಾರಣ ಅವರಲ್ಲನೇಕರನ್ನು ಹಿಂದಕ್ಕೆ ಕಳುಹಿಸಲಾಗಿದೆ.

ರಾಸ್ ಸಯೂಮರ ಯುದ್ಧೋಪಾಯ.

ರಾಸ್ ಸಯೂಮರಿಗೆ ಅಪರಿಮಿತ ಸೈನ್ಯಗಳು ಬಂದು ಬೆಂಬಲವತ್ತಿರುವದಾದರೂ, ಅವರು ಇಟಲಿಯನ್ನೆದುರಿಸುವ ಕಾರ್ಯದಲ್ಲಿಲ್ಲ. ಆಕ್ಸುಂ ಪಟ್ಟಣದ ಬಳಿ ಅಬಿಸೀನಿಯದ ಮಹತ್ವಾದ ಸೈನ್ಯವು ಕಾದು ನಿಂತಿರುವುದು. ಇಟಲಿಯವರು ಮಕೇಲ್ ಪಟ್ಟಣವನ್ನಾಕ್ರಮಿಸಲು ಬರುವ ಹಾದಿಯಲ್ಲಿನ ಬೆಟ್ಟಗಳ ಇಕ್ಕಟ್ಟಾದ ಪ್ರದೇಶದಲ್ಲಿ ಅವರನ್ನು ಅಬಿಸೀನಿಯರು ಮುತ್ತುವರೆಂದು ಊಹಿಸಲಾಗಿದೆ.

ಆಕ್ಸುಂ ಪಟ್ಟಣವನ್ನು ವ್ಯವೇಶಿಸಿದರು.

ಈ ದಿನ ಬೆಳಿಗ್ಗೆ 7-15 ಕ್ಕೆ ಇಟಲಿಯವರು ಫೂರ್ಹಲ್ ಬೆಡೊಗ್ಲಿಯೊಯವರ ನಾಯಕತ್ವದಲ್ಲಿ ಆಕ್ಸುಂ ಪಟ್ಟಣವನ್ನು ಪ್ರವೇಶಿಸಿ ಅಲ್ಲಿ ಇಟಲಿಯ ಧ್ವಜವನ್ನು ಏರಿಸಿದ್ದಾರೆ.

ಸಡಿಮದ್ದಿನ ಉಗ್ರಾಣವನ್ನು ಧ್ವಂಸ ಮಾಡಿದ್ದರು.

ಮಕೇಲ್ ಪಟ್ಟಣದ ಒಳಿಯಲ್ಲಿನ ಅಬಿಸೀನಿಯದವರ ಸೊಡ್ಡ ಸಿಡಿಮದ್ದಿನ ಉಗ್ರಾಣಕ್ಕೆ ಇಟೆಲಿಯವರು ಬಾಂಬೆಸೆದು ಅದನ್ನು ಪೂರ್ಣ ಧ್ವಂಸಮಾಡಿರುವರು.

ಬ್ಯೂಸೋ ಮುಸೋಲಿನಿಯವರ ಬಚಾವು.

ಮುಸೋಲಿನಿಯವರ ಪುತ್ರ ಬ್ಯೂನೋ ಮುಸೋಲಿನಿಯವರು ಮಕೇಲ ಪ್ರಾಂತ್ಯದಲ್ಲಿ ವಿಮಾನದಲ್ಲಿ ಸಂಚರಿಸುತ್ತಿದ್ದಾಗ್ಗೆ ಅವರ ವಿಮಾನಕ್ಕೆ ನಾಲ್ಕೈದು ಗುಂಡುಗಳು ತಾಗಿದವು. ಸ್ವತಃ ಅವರಿಗೇನೂ ಜಖಂ ಆಗಿರುವದಿಲ್ಲ. ಅವರು ಹೇಗೂ ಮೃತ್ಯುವಿನಿಂದ ಪಾರಾಗಿರುವರು.

ಭಾರತದ ಮುಸ್ಲಿಮರ-ಸಹಾನುಭೂತಿ.

ಸಿಂಧ್ ಮುಸ್ಲಿಮ್ ಸಂಘದ ಕಾರ್ಯದರ್ಶಿಗಳಾದ ಮೆ. ಆಲಿ ಮಹಮದ್‌ರವರು ಈ ಪ್ರಕಾರ ಪ್ರಕಟಿಸಿರುವರು. "ಅಬಿಸೀನಿಯದಲ್ಲಿನ 4 ಮಿಲಿಯ ಮುಸಲ್ಮಾನರು ಇಂದು ಇಟೆಲಿಯ ಧಾಳಿಯಿಂದ ಕಷ್ಟಪಡುತ್ತಿರುವರು. ಇಟಲಿಯು ಅದಿಯಿಂದಲೇ ಇಸ್ಲಾಮಿನ ವಿರೋಧಿ. ಟ್ರಿಪೋಲಿಯ ಅರಬೀಯರಿಗೆ ಇಟಲಿಯು ಮಾಡಿದ್ದನ್ನು ಯಾರೂ ಮರೆಯಲಾರರು. ಅಲ್ಲದೆ ಅಬಿಸೀನಿಯವು ಇಸ್ಲಾಮಿನ ಹಿತೈಷಿ. ಅಬಿಸೀನಿಯವು ಇಟಲಿಯ ಕೈವಶವಾಯಿತೆಂದರೆ ಇಸ್ಲಾಮಿಗೆ ದೊಡ್ಡ ವಿಪತ್ತು ಬರುವದು ಆದ್ದರಿಂದ ಸಕಲ ಮಹಮ್ಮದೀಯರೂ ಸೇರಿ ಬ್ರಿಟಿಷ್ ಸರಕಾರವು ಅಬಿಸೀನಿಯಕ್ಕೆ ಸಹಾಯಮಾಡುವಂತೆ ಬಿನ್ನೈಸಬೇಕು."

ಬೆಜವಾಡದವರ ಸಹಾನುಭೂತಿ.

ಬೆಜವಾಡದ ಪುನಿವಾಸಿಗಳು ಶ್ರೀ ಪಿ ಆಂಜನೇಯುಲುರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಬಿಸೀನಿಯದವರ ಮೇಲೆ ಸಹಾನುತಾಪವನ್ನು ಸೂಚಿಸುವ ತರಾವು ಪಾಸು ಮಾಡಿದರು.

ಅಕ್ಟೋಬರ್ ತಾ. 16.

ಅಡೋವದ ವರ್ತಮಾನ ನಿಜವಲ್ಲ.

ಅಡೋವವನ್ನು ರಾಸ್ ಸಯೂಮರ ನಾಯಕತ್ವದಲ್ಲಿ ಅಬಿಸೀನಿಯ ಸೈನಿಕರು ಕಗ್ಗತ್ತಲೆಯಲ್ಲಿ ಮುತ್ತಿ 2500 ಇಟಲಿಯವರನ್ನು ತಂಡದಿಸಿದರೆಂಬ ವರ್ತಮಾನವು ನಿಜವಲ್ಲವೆಂದು ಪ್ರಕಟವಾಗಿದೆ.

ಒಗಡನ್ ಪ್ರಾಂತದಲ್ಲಿ ಬಾಂಬಿನ ಸುರಿಮಳೆ.

ಇಟಲಿಯವರ 10 ಸಾವಿರ ಸೈನಿಕರನ್ನು ಇಟಾಲಿಯನ್ ಸೋಮಾಲಿಲೇಂಡಿನಿಂದ ಎರಿಟ್ರಿಯಾಕ್ಕೆ ಒಯ್ದಿರುವರು. ಒಗಡನ್ ಪ್ರಾಂತದಲ್ಲಿ ಇಟಲಿಯವರ ವಿಮಾನಗಳು 300 ಬಾಂಬುಗಳಿಂದ ಟಫ್ಫಾರಿ ಮತ್ತು ಖಾಟಿಮ ಎಂಬ ಪಟ್ಟಣಗಳನ್ನು ಸೂರೆ ಮಾಡಿದವು. ಆಗ ಅಬಿಸೀನಿಯದವರು ಗುಂಡು ಹೊಡೆದು ಎಂಡು ವಿಮಾನಗಳನ್ನು ನೆಲಕ್ಕೆಳಿಸಿದರು. ಅದರಲ್ಲಿದ್ದ ವೈಮಾನಿಕರನ್ನು ಸೆರೆ ಹಿಡಿದಿರುವರು.

ಯುದ್ಧದ ಪರಿಣಾಮ—ಗ್ಲಿಸರಿನ್ನಿನ ಬೆಲೆ ಏರಿತು.

ಸಾಧಾರಣವಾಗಿ ಅನೇಕ ಔಷಧ, ಟಿಂಕ್ಚರ್ ಪೇಸ್ಟ್ ಮತ್ತು ಸಾಬೂನುಗಳಿಗೆಲ್ಲ ಅವಶ್ಯಕವಾದ ಗ್ಲಿಸರಿನ ಬೆಲೆಯು ಬೆಂಬಾಯಿನಲ್ಲಿ ಯೂ ಮತ್ತು ಕಲ್ಕತ್ತದಲ್ಲಿಯೂ ಯುದ್ಧದ ದೆಸೆಯಿಂದ ಶೇಕಡ 300ರಷ್ಟು ಏರಿದೆ.

ಅಕ್ಟೋಬರು ತಾ. 17.

ಬ್ರಿಟಿಷ್ ಒಂಟೆ ಪಟಲಾಮುಗಳ ನಷ್ಟ.

ಒಗಡನ್ ಪ್ರಾಂತ್ಯದಲ್ಲಿ ವಿಷಗಾಳಿ ಮತ್ತು ಬಾಂಬುಗಳ ಸಹಾಯದಿಂದ ಮುಂದುವರಿಯುತ್ತಿರುವ ಇಟೆಲಿಯ ಸೈನಿಕರು ಗಡೀಯಲ್ಲಿಡಲ್ಪಟ್ಟಿರುವ ಬ್ರಿಟಿಷ್ ಒಂಟೆ ಪಟಲಾಮುಗಳಿಗೆ ನಷ್ಟ ಉಂಟುಮಾಡಿದೆಯೆಂದು ಫರ್ತಮಾನ ಈ ವಾರ್ತೆಯು ಅಧಿಕಾರ ಪೂರ್ವಕ ಪ್ರಕಟವಾಗಿದ್ದರೂ ನಂಬಲು ಅನರ್ಹವಾದದ್ದಲ್ಲ.

ಮಳೆಯು ಇಟಲಿಯವರಿಗೆ ಅಡಚಣೆ.

ಒಗಡನ್ ಪ್ರಾಂತ್ಯದಲ್ಲಿ ಪುನಹ ಮಳೆ ಸುರುವಾಗಿದೆ. ಇದರಿಂದ ಇಟಲಿಯ ಸೈನಿಕರಿಗೆ ಮುಂದುವರಿಯಲು ಸಾಧ್ಯವಿಲ್ಲವಾಗಿದೆ. ಅಕ್ಟೋಬರು ಅಂತ್ಯದ ವರೆಗೆ ಮುಸೋಲಿನಿಯವರು ಕಾದಿದ್ದರೆ ಇಟಲಿಯ ಸೈನ್ಯದವರು ವಿನೂನ, ಬಾಂಬು, ಟ್ಯಾಂಕ್‌ಗಳ ಸಹಾಯದಿಂದ ಸುಲಭವಾಗಿ ದಕ್ಷಿಣ ಅಬಿಸೀನಿಯದಲ್ಲಿ ಜಯ ಹೊಂದಬಹುದಾಗಿತ್ತು. ಒಗಡನ್ ಪ್ರಾಂತ್ಯವು ಮೊದಲೆಷ್ಟೋ ಸಾರಿ ಭವಿಷ್ಯ ಹೇಳುವವರನ್ನು ಮೋಸಗೊಳಿಸಿತ್ತು; ಈ ಸಾರಿಯೂ ಹಾಗೆಯೆ ಮಾಡಿದೆ. ಮಳೆಯ ನೀರಿನ ದೆಸೆಯಿಂದ ಇಟೆಲಿಯ 'ಟ್ಯಾಂಕ್'ಗಳು ಉತ್ತರ ಎಂಬಲ್ಲಿ ನೆಲದಲ್ಲಿ ಹೂತು ಹೋಗಿವೆ. ಆ ಪಟ್ಟಣವನ್ನು ಇತೋಪಿಯನರು ಮರಳಿ ಗೆದ್ದಿರುವರು. ಈ ಮಳೆಯು ತಮಗೆ ದೈವ ಸಹಾಯವೆಂದು ಇತೋಪಿಯನರ ಭಾವನೆ. ಇದರ ದೆಸೆಯಿಂದ ಇಟಲಿಯವರು 'ಸುಮ್ಮನಿರುವಾಗ್ಗೆ' ಅಬಿಸೀನಿಯರು ತಮ್ಮ ಸೈನ್ಯಗಳನ್ನು ಶಸ್ತ್ರಗಳಿಂದ ಸಜ್ಜುಗೊಳಿಸುತ್ತಾ, ರಕ್ಷಣೆಯ ಏರ್ಪಾಡುಗಳನ್ನು ತೀಕ್ಷ್ಣವಾಗಿ ಮಾಡುತ್ತಿರುವರು. ಬಬರಿಯಾದಲ್ಲಿ ಹೊಡಗುಗಳಿಂದ ಇಳಿಸಲ್ಪಟ್ಟ 100 ಟನ್ನಿನಷ್ಟು ಶಸ್ತ್ರಗಳು ಲಾರಿಗಳಲ್ಲಿ ಜಿಜಿಗಾಕ್ಕೆ ತರಲ್ಪಟ್ಟವು. ಬ್ರಿಟಿಷ್ ಸೋಮಾಲಿ ಲ್ಯಾಂಡ್ ಮೂಲ ನಿವಾಸಿಗಳಿಗೆ ಇಟಲಿಯವರ ಮೇಲೆ ದ್ವೇಷವೂ, ಅಬಿಸೀನಿಯದವರ ಮೇಲೆ ಸಹಾನುಭೂತಿಯೂ ಹೆಚ್ಚುತ್ತಿದೆ.

'ಜಯವು ನಮ್ಮದು'

ತಾರೀಕು 17ರಲ್ಲಿ ಅಬಿಸೀನಿಯದ ಚಕ್ರವರ್ತಿಯವರ ಅರಮನೆಯ ಮುಂದೆ 50,000 ಸೈನಿಕರು ಯುದ್ಧ ಸನ್ನದ್ಧರಾಗಿ ಬಂದು ನಿಂತಾಗ್ಗೆ ನೆರೆದವರು—'ಪ್ರತಿಯೊಬ್ಬನೂ ಮರಣಕ್ಕೆ ಹೆದರದೆ ದೇಶಕ್ಕಾಗಿ ತ್ಯಾಗ ಮಾಡಬೇಕು. ಇಟಲಿಯು ತನ್ನ ವಿಮಾನ, 'ಟ್ಯಾಂಕ್,' ಬಾಂಬುಗಳಿಂದ ಹೆಮ್ಮೆಪಡಬಹುದು; ಆದರೆ ಜಯವು ನಮಗಾಗುವುದು. ನಾವು ಶಾಂತಿಗೆ ಯತ್ನಿಸಿದೆವು. ಆದರೆ ದೈವೇಚ್ಛೆ ಬೇರೆಯಾಯಿತು ಜನತಾಂಗಗಳ ಕೂಟದ ಗೌರವಕ್ಕಾಗಿ ಇಷ್ಟರ ವರೆಗೆ ಕಾದೆವು. ಇಟಲಿಯು ಬಲ ಪ್ರಕಟಿಸಿದ್ದರಿಂದ ಈಗ ಧೈರ್ಯವಾಗಿ ಹೋರಾಡತೊಡಗಿದೆವು' ಎಂದು ಹೇಳಿ ಸೈನಿಕರಲ್ಲಿ ಹುರಿದುಂಬಿಸಿದರು.

ಕೆಲವು ದಿನಸಗಳಲ್ಲಿ ಅಬಿಸೀನಿಯದ ಚಕ್ರವರ್ತಿಯವರು ಉತ್ತರ ರಣರಂಗದಲ್ಲಿ ಮುಖ್ಯ ಸ್ಥಳವಾದ ಡೆಸ್ಸಿ ಎಂಬಲ್ಲಿಗೆ ಹೋಗಬಹುದೆಂದು ಸುದ್ದಿ.

ಅಡ್ಡಿಸ್ ಅಬಾಬಕ್ಕೆ ಬಾಂಬು ಹಾಕುವುದಿಲ್ಲ.

ಅಬಿಸೀನಿಯದ ಮುಖ್ಯ ಪಟ್ಟಣವಾದ ಅಡ್ಡಿಸ್ ಅಬಾಬವನ್ನು ಯಾವುದೇ ತಾತ್ಕಾಲಿಕವಾಗಿಯಾಗಲೀ, ಯುದ್ಧ ಸಾಮಗ್ರಿಗಳ ಸ್ಫೋಟನಕ್ಕಾಗಿಯಾಗಲಿ ಮಾಡಿಕೊಳ್ಳದೆ ಹೋದರೆ ಅದಕ್ಕೆ ಬಾಂಬು ಎಸೆಯುವದಿಲ್ಲವೆಂದು ಇಟಲಿಯವರು ಹೇಳಿಕೆ.

ದೇಶದ್ರೋಹಿಗೆ ಇಟಲಿಯ ಬಹುಮಾನ.

ಚಕ್ರವರ್ತಿಯ ಪಕ್ಷ ಬಿಟ್ಟು, ಇಟಲಿಯ ಕಡೆ ಸೇರಿದ ರಾಸ್ ಗುಗ್ಸಾನನ್ನು ಇಟಲಿಯವರು ಟೈಗರ್ ಪ್ರಾಂತ್ಯದ 'ರಾಸ್' ಅಂದರೆ ಅಧಿಪತಿಯನ್ನಾಗಿ ಮಾಡಿರುವರು.

ಧಾಳಿ ನಡೆಸುವವರ ಕಷ್ಟ.

ಮುಸ್ಸಾವದ ಬಳಿ ಸೈನ್ಯವು ಹೊಡಗುಗಳಿಂದ ತುಂಬಿ ಹೋಗಿದೆ. ಸಾಮಾನು ಇಳಿಸದೆ 5 ತಿಂಗಳುಗಳಿಂದ ಕಾದು ಕೊಂಡಿರುವ ಹಡಗುಗಳಿವೆ. ಯುದ್ಧ ಸಾಮಗ್ರಿಗಳೇ ಮೊದಲು ಇಳಿಸಲ್ಪಡುತ್ತಿವೆ. ಇಟಲಿಯ ಸೈನಿಕರು ಸಿಕ್ಕಿದ ಆಹಾರ, ನೀರು, ಸಾಲದೆಯೂ, ಶಿಬಿರವನ್ನು ತಡೆಯಲಾರದೆಯೂ ಕಷ್ಟಪಡುತ್ತಿರುವರು. ಯುದ್ಧರಂಗಕ್ಕಿರುವ 350 ವಿಮಾನಗಳು ಒಂದು ಹೊಡಗಿನಲ್ಲಿ ಮುಸ್ಸಾವಕ್ಕೆ ಇಟಲಿಯಿಂದ ಬಂದು ತಲಪಿದ್ದೆ. ಇಟೆಲಿಯವರು ಮುಸ್ಸಾವ ಪಟ್ಟಣವನ್ನು ಮೆಷಿನ್ ಗನ್ ಮುಂತಾದುವುಗಳಿಂದ ಭದ್ರಪಡಿಸುತ್ತಿರುವರು. ಈಗ ಯುದ್ಧರಂಗದಲ್ಲಿ ಇಟಲಿಯವರ 500 ವಿಮಾನಗಳಿವೆ. ಇವುಗಳಿಂದ ಅಬಿಸೀನಿಯದ ಮೇಲೆ ಬಾಂಬುಗಳ ಬದಲು ಗುಂಡುಗಳ ಮಳೆ ಸುರಿಸುವರು.

ಇತೋಪಿಯಕ್ಕೆ ಯುದ್ಧ ಸಾಮಾನುಗಳ ತಡೆಯಿಲ್ಲ.

ಇಂಗ್ಲೆಂಡು, ಪೋಲೆಂಡ್, ಗ್ರೀಸ್, ಫ್ರಾನ್ಸ್, ಕ್ಯೂಬ, ಫಿನ್ಲೆಂಡ್, ಕೊಲಂಬಿಯ ಮತ್ತು ಲಾಟ್ವಿಯ ದೇಶಗಳು ಇತೋಪಿಯಕ್ಕೆ ಯುದ್ಧ ಸಾಮಾನುಗಳನ್ನು ಕಳುಹಿಸಲು ಇದ್ದ ತಡೆಯನ್ನು ತೆಗೆದು ಹಾಕಿವೆ. ಬ್ರಿಟನ್ನಿನಿಂದ ಎರಡೂ ಹಡಗು ಯುದ್ಧ ಸಾಮಾನುಗಳು ಅಬಿಸೀನಿಯಕ್ಕೆ ಕಳುಹಿಸಲ್ಪಟ್ಟಿವೆ.

ಅಬಿಸೀನಿಯಕ್ಕೆ ದಾನಗಳು.

ಲಂಡನ್ನಿನಲ್ಲಿರುವ ಇತೋಪಿಯದ ರಾಯಭಾರಿಗೆ ಇಂಗ್ಲೆಂಡಿನ ಗಂಡಸರು, ಹೆಂಗಸರು ಸಹಾನುಭೂತಿಯ ಹಲವು ದಾನಗಳನ್ನು ಮಾಡುತ್ತಿರುವರು. ಸ್ಟಾಂಪಿನಿಂದ ರಿವಾಲ್ವರ್ ವರೆಗೆ ದಾನಗಳು ಕಳುಹಿಸಲ್ಪಡುತ್ತಿವೆ. ಇಷ್ಟರ ವರೆಗೆ 180 ಪವನುಗಳು ದೊರೆತಿವೆ. ಹಲವರು ಯುದ್ಧಕ್ಕೆ ಬರುವೆನೆಂದು ಸೂಚಿಸಿರುವರು. ಆದರೆ ಈ ಸೇವೆಯು ವಂದನಾಪೂರ್ವಕ ತಿರಸ್ಕರಿಸಲ್ಪಡುತ್ತಿದೆ.

ವಿಷದ ವಾಯುವನ್ನು ತಡೆಯುವ ಉಪಾಯ.

ಇಟಲಿಯವರು ಬಾಂಬುಗಳಿಂದ ವಿಷದ ಗಾಳಿಯನ್ನು ಹರಡಿದ ಕೂಡಲೆ ಇತೋಪಿಯನರು ಒಂದು ತುಂಡು ಒದ್ದೆ ಬಟ್ಟೆಯನ್ನು ಮುಖಕ್ಕೆ ಮುಚ್ಚಿಕೊಳ್ಳಬೇಕೆಂದು ಹೊರಾಡಿನ ಗವರ್ನರ ಹುಕುಂ.

ಮಂತ್ರಿಯ ಮಕ್ಕಳು ಹೊಂಟರು.

ಲಂಡನ್ನಿನಲ್ಲಿರುವ ಇತೋಪಿಯ ಮಂತ್ರಿಯು ಇಬ್ಬರು ಮಕ್ಕಳು ವಿಮಾನದಲ್ಲಿ ಅಬಿಸೀನಿಯದ ಮುದ್ದರಾಗೆ ಹೊರಟರು. 'ವಾಯುಮಂಡಲದಲ್ಲಿ ಮುಸ್ಸೊಲಿನಿಯವರ ಮಕ್ಕಳನ್ನು ಕಂಡರಾಗಬಹುದು' ಎಂದು ಅವರು ಹೇಳಿದರು.

ಅಕ್ಟೋಬರ್ ತಾ. 18.

ಟೈಗರ್ ರಂಗ ಭೂಮಿಯಲ್ಲಿ ಸ್ಥಿತಿಯು ಇತೋಪಿಯನರ ಪರವಾಗಿ ಪರಿವರ್ತಿಸುತ್ತಿದೆ. ಇಟಲಿಯ ಸೈನ್ಯದವರು ಮಕೇಲಿಗೆ 20 ಮೈಲು ದೂರದಲ್ಲಿರುವ ಆಡಮೆಸ್ಕೊಗೆ ತಡೆಯಿಲ್ಲದೆ ತಲಪಿರುವರು. ಮಕೇಲ್ ಪಟ್ಟವು ಬೆಟ್ಟದ ಮೇಲಿರುವುದರಿಂದ ಆಡೋವವನ್ನು ಹಿಡಿದಷ್ಟು ಸುಲಭವಾಗಿ ಇದನ್ನು ಹಿಡಿಯಲಾಗದು. ಬೆಟ್ಟ ಹತ್ತುವಾಗ್ಗೆ ಇತೋಪಿಯನರು ಕಾಡಲ್ಲಿ ಅಡಗಿಕೊಂಡು ಇಟಲಿಯನರಿಗೆ ತುಂಬಾ ನಷ್ಟ ಉಂಟುಮಾಡಬಹುದು.

ಮಕೇಲ್ ಪಟ್ಟದ ಮುತ್ತಿಗೆ.

ಮೆಶಿನ್ ಗನ್‌ಗಳಿಂದ ಇಟಲಿಯವರು ಮಕೆಲ್ ಪಟ್ಟದ ಮೇಲೆ ಧಾಳಿ ನಡಿಸಿದರೆಂದೂ, 60 ಜನರು ಮಡಿದರೆಂದೂ ವರ್ತಮಾನ.

ಇತೋಪಿಯನರು ಹಿಂದೆ ನಿಂತರು.

20 ಟ್ಯಾಂಕ್‌ಗಳ ಸಮೇತ ಇಟಲಿಯ ಕನ್ನಡ ಸೈನಿಕರು ಗಲೋಗೂಬಿಯನ್ನು ಮುತ್ತಿದರು. ಆಗ್ಗೆ ಇತೋಪಿಯನರ ಸೇನಾಪತಿಯು ಶಸ್ತ್ರಗಳು ದೊರೆತ ಮೇಲೆ ಶತ್ರುವಿನ ಮೇಲೆ ಬೀಳಬಹುದೆಂದು ತನ್ನ ಸೈನಿಕರನ್ನು ಹಿಂದಕ್ಕೆ ಕಳುಹಿಸಿಬಿಟ್ಟರು.

ಮುಸ್ಸೋಲಿನಿಯ ಹಿರೇ ಮೊಗನ ವ್ಯಾಪಾರ ಬಚಾವು.

ಮುಸ್ಸೋಲಿನಿಯವರ ಹಿರೇ ಮಗ ವಿಟ್ಟೋರಿಯು ವಿಮಾನದಲ್ಲಿ ಅಬಿಸೀನಿಯದ ಮೇಲೆ ಹಾರಾಡುತ್ತಿರುವಾಗ್ಗೆ ಹಲವು ಗುಂಡುಗಳು ಅವರ ವಿಮಾನಕ್ಕೆ ತಗಲಿದರೂ ಅವರಿಗೆ ಪೆಟ್ಟಾಗಲಿಲ್ಲ.

ಇಟಲಿ ಸೈನ್ಯದ ಸೋಲು.

ಟೆಸ್ಫಾ ಸುಲ್ತಾನರ ಸಹಾಯ ದೊರೆಯುವದೆಂಬ ನಿರೀಕ್ಷಣೆಯಿಂದ ಇಟೆಲಿಯ ಒಂದು ದಳ ನೀರಾವರಿಯೊದ ಹವಾಷಕ್ಕೆ ಬರಲು ಯತ್ನಿಸಿತು. ಆದರೆ ಸುಲ್ತಾನರ ಸಹಾಯ ದೊರೆಯದೆ ಇತೋಪಿಯನರಿಂದ ಹಿಂದೋಡಿಸಲ್ಪಟ್ಟಿತು.

ಇಟೆಲಿಯವರ ಮುಂದಿನ ದೃಷ್ಟಿ.

ಇಟಲಿಯ ಸೇನಾಪತಿಗಳು ಮುಂದೆ ಮಕೇಲೆಯನ್ನು ಮುತ್ತುವ ವಿಚಾರವನ್ನೆ ಯೋಚಿಸುತ್ತಿರುವರು. ರಸ್ತೆ ಕೆಲಸವು ಮತ್ತು ಬಾವಿ ತೊಡುವುದು ಜಹು ಅವಸರದಲ್ಲಿ ಮಾಡಲ್ಪಡುತ್ತಿದೆ.

ಕಾಜಿಯ ಪ್ರಯತ್ನ ನಿಂತಿಲ್ಲ.

ಇತೋಪಿಯ—ಇಟಲಿ ಯುದ್ಧದಿಂದ ಸಂಬಂಧ ಕಾಜಿ ಸಂಧಾನ ನಡಿಸಲು ರೋಮ್, ಪ್ಯಾರಿಸ್ ಮತ್ತು ಲಂಡನ್ ಪಟ

ಗಳೊಳಗೆ ಪತ್ರವ್ಯವಹಾರಗಳು ನಡೆಯುತ್ತಿವೆಯೆಂದೂ, ರಾಜಿಯ ಪ್ರಯತ್ನ ನಿಂತಿಲ್ಲವೆಂದೂ ಸುದ್ದಿ.

ಇಟಲಿಯು ಸಾಮಾನುಗಳ ಬಹಿಷ್ಕಾರ.

ಇಟಲಿಯಿಂದ ಬರುವ ಸಾಮಾನುಗಳನ್ನೆಲ್ಲಾ ಬಹಿಷ್ಕರಿಸಬೇಕೆಂಬ ಬ್ರಿಟಿಷ್ ಪ್ರತಿನಿಧಿಯ ಸಲಹೆಯನ್ನೂ, ಮುಖ್ಯ ಉತ್ಪತ್ತಿಗಳನ್ನು ಇಟಲಿಗೆ ಕಳುಹಿಸುವುದನ್ನು ನಿಲ್ಲಿಸಬೇಕೆಂಬ ಫ್ರೆಂಚ್ ಸೂಚನೆಯನ್ನೂ ಲೀಗಿನ ಆರ್ಥಿಕ ಉಪಕಮಿಟಿಯವರು ಮುಂಜೂರು ಮಾಡಿರುವರು. ಇದನ್ನು ಜಾರಿಗೆ ತರುವ ತಾರೀಕು ನಿಶ್ಚಯಿಸಲು ಉಪಕಮಿಟಿಯು ಈ ತಾ. 29 ರಲ್ಲಿ ಸೇರುವುದು.

ಆರ್ಥಿಕ ಬಹಿಷ್ಕಾರ—ರಷ್ಯದ ಮುಂದಾಳುತನ.

ಯೂಗೊಸ್ಲಾವ್ಯ, ನಾರ್ವೆ ಮತ್ತು ರಷ್ಯಾದ ಸೋವೈಟ್ ಸರ್ಕಾರಗಳು ಇಟಲಿಗೆ ಯುದ್ಧಸಾಮಾನು ಕಳುಹಿಸುವುದಿಲ್ಲವೆಂದು ನಿಶ್ಚಯಿಸಿವೆ. ಅಲ್ಲದೆ ರಷ್ಯಾ ಸರ್ಕಾರವು ಇಟಲಿಯ ಮೇಲೆ ಹಣದ ಬಹಿಷ್ಕಾರವನ್ನೂ ಪ್ರಾರಂಭಿಸಿದೆ. ಈ ಕಾರ್ಯ ಕೈಕೊಂಡದ್ದು ರಷ್ಯವೇ ಮೊದಲು.

ಇಟಲಿ—ಅಲ್ಬೇನಿಯಾ ಒಪ್ಪಂದವೇ ?

ಎಡ್ರಿಯಾಟಿಕ್ ಸಮುದ್ರ ತೀರವನ್ನು ಭದ್ರಪಡಿಸಲು ಇಟಲಿ—ಅಲ್ಬೇನಿಯಾದೊಳಗೆ ಒಪ್ಪಂದವಾಗಿದೆಯೆಂದೂ, ಅಲ್ಬೇನಿಯಾ ಸೈನಿಕರು ಯುದ್ಧ ಸನ್ನದ್ಧರಾಗುತ್ತಿರುವರೆಂದೂ ಹೊರಟ ವಾರ್ತೆಯು ಸುಳ್ಳೆಂದು ಅಲ್ಬೇನಿಯ ಸರ್ಕಾರದವರು ಪ್ರಕಟಿಸಿರುವರು.

ಈಜಿಪ್ಟಿನಲ್ಲಿ ಮುಂಜಾಗ್ರತೆ.

ಈಜಿಪ್ಟಿನಲ್ಲಿರುವ ಬ್ರಿಟಿಷ್ ಸೈನವು ಹೆಚ್ಚಿಸಲ್ಪಡುತ್ತಿದೆ. ಒಂದು ಬ್ರಿಟಿಷ್ ಮತ್ತು ಒಂದು ಈಜಿಪ್ಟಿನ ದಳವು ಮೆಸ್ಸ್ ವೂಟ್ರುತ್ ಎಂಬಲ್ಲಿಗೆ ಕಳುಹಿಸಲ್ಪಟ್ಟಿದೆ.

ಇಂಡಿಯಾದ ಸಹಾನುಭೂತಿ—ಚಕ್ರವರ್ತಿಯವರ ವಂದನೆ.

ಸಿಖ್ಖರ ಸಂಘದ ಸೆಕ್ರೆಟರಿಯವರು ಅಬಿಸೀನಿಯಾಕ್ಕೆ ಸಿಖ್ಖ್ ಜನಾಂಗದ ಸಹಾನುಭೂತಿಯನ್ನು ಸೂಚಿಸಿ ಬರೆದ ಪತ್ರಕ್ಕೆ ಚಕ್ರವರ್ತಿ ನೇಗಸ್‌ರವರು ವಂದಿಸಿ ಜವಾಬು ಕೊಟ್ಟಿರುವರು.

ಅಕ್ಟೋಬರು ತಾ. 19.

ರಣರಂಗದಲ್ಲಿ ವಿರಾಮ.

ಯುದ್ಧರಂಗದಲ್ಲಿ ಇಲ್ಲವೂ ಮುಂದವಾಗಿದೆ. ಇಟಲಿಯವರು ಉತ್ತರದಲ್ಲಿ ಹಲವು ರಸ್ತೆಗಳನ್ನೂ, 121 ಬಾವಿಗಳನ್ನೂ ಮಾಡಿ ತಮ್ಮ ಕೈವಶವಾದ ಪ್ರದೇಶಗಳನ್ನು ಭದ್ರಪಡಿಸುತ್ತಿರುವರು.

ಇಟಲಿಯ ಸೈನ್ಯ ಬಲ.

ಇಂದು ಇಟಲಿಯ 1,200,000 ಸೈನಿಕರು ಯುದ್ಧ ಸನ್ನದ್ಧರಾಗಿರುವರು. ಅವರಲ್ಲಿ 200,000 ಜನರು ವಸಾಹತುಗಳಲ್ಲಿರುವರು. ಅಲ್ಲದೆ ಸ್ವಲ್ಪ ಸಮಯದಲ್ಲೇ ಸಿದ್ಧರಾಗುವವರು ಹಲವರಿರುವರು.

ಇಟಲಿ ಕೆಲಸಗಾರರ ಭೇಸರಿಕೆ.

ಮುಸ್ಸಾವದಲ್ಲಿ ಕೆಲಸ ಮಾಡುತ್ತಿದ್ದು ಕಾಯುಲೆಯಾಗಿ ಇಟಲಿಗೆ ಹಿಂತಿರುಗುತ್ತಿರುವವರು 'ಆಫ್ರಿಕವು ನರಕ'ವೆಂದು ಅನ್ನುತ್ತಿರುವರು. ಪೋರ್ಟ್ ಸೆಯಿಡಿನಲ್ಲಿರುವ 18,000 ಇಟಲಿಯವರ ಪೈಕಿ 25 ಜನರು ಮಾತ್ರ (ದೊಡ್ಡ ಸಂಬಳವಿದ್ದರೂ) ಇರಿಟ್ರಿಯಾದಲ್ಲಿ ಕೆಲಸಕ್ಕೆ ಒಪ್ಪಿಕೊಂಡರು.

ಅಕ್ಟೋಬರ್ ತಾ. 20.

ಭೀಕರ ಕದನ—ಅಪರಿಮಿತ ಪ್ರಾಣಹಾನಿ.

ದಕ್ಷಿಣ ಪಾರ್ಶ್ವದಲ್ಲಿ ಭಯಂಕರ ಕಾಳಗವಾದ್ದಲ್ಲಿ ಎರಡು ಪಕ್ಷದಲ್ಲೂ ವಿಪರೀತ ಪ್ರಾಣಹಾನಿಯಾಗಿರುವದು. ಆದರೂ ಅಬಿಸೀನಿಯಾದವರಿಗೇನೇ ಹೆಚ್ಚಿನ ನಷ್ಟ. ಇಟಲಿಯು ಏನೂನಗಳು ಒಗಾಡನ್ ಪ್ರಾಂತದ ಬಾಗ್‌ಹೆರಿ, ಶಿಲ್ಲಾವೆ ಮೊದಲಾದ ಸ್ಥಳಗಳಲ್ಲಿ ಬಾಂಬುಗಳ ಸುರಿಮಳೆ ಗರೆಯುತ್ತ ಹಾರಾಡುತ್ತಲಿರುವಾಗ್ಗೆ ಅಬಿಸೀನಿಯಾ ಸೈನಿಕರು ಧೈರ್ಯದಿಂದ ಗುಂಡುಗಳನ್ನು ಹೊಡೆಯುತ್ತಾ ಅಂಭಿಸಿ ಏನೂನಗಳಿಗೆ ಪ್ರತಿಭಟಿಸಿದರು. ಹಾಗೂ ಆ ಸ್ಥಳಗಳನ್ನು ಹಿಡಿಯಲು ಕೈ ಕೈ ಕಾಳಗ ಮಾಡಬೇಕಾಗಿ ಬಂತು. ಇಟಲಿಯುದಂಡಿಗೂ ಅಬಿಸೀನಿಯಾದ ಸೈನ್ಯಕ್ಕೂ ಕೈ ಕೈ ಕಾಳಗವಾಗಿ ಅಬಿಸೀನಿಯಾದವರಿಗೆ ಭಾರಿ ನಷ್ಟವಾಗಿ ಆ ಸ್ಥಳಗಳು ಇಟಲಿಯವರ ಕೈವಶವಾಯಿತು.

ಮುಸೋಲಿನಿಯ ಭಾವಚಿತ್ರ ಪತಾಕೆ.

ಅಲ್ಲಲ್ಲಿ ಸೈನ್ಯಗಳು ಒತ್ತರದಿಂದ ಶೇಖರಿಸಲ್ಪಟ್ಟಿವೆ. ಮೆಕೇಲ್ ಪಟ್ಟಿಣವನ್ನು ಇಟಲಿಯವರು ಆಕ್ರಮಣ ಮಾಡುವಾಗ್ಗೆ ಅವರನ್ನೆದುರಿಸಲು ಅಬಿಸೀನಿಯಾದವರು ಒಳ್ಳೆ ಪರ್ವತ ಪ್ರದೇಶಗಳಲ್ಲಿ ಸೈನ್ಯವನ್ನು ಸೇರಿಸಿಟ್ಟಿರುವರು. ಇಕ್ಕಡೆಗಳಲ್ಲಿಯೂ ದೊಡ್ಡ ಕದನಕ್ಕಿರುವ ಏರ್ಪಾಡುಗಳು ಭರದಿಂದ ನಡೆಸಲ್ಪಡುತ್ತಿವೆ. ಇಟಲಿಯವರು ಅವರ ಸ್ವಾಧೀನವಾದ ಸ್ಥಳಗಳಲ್ಲೆಲ್ಲ ಮುಸೋಲಿನಿಯವರ ದೊಡ್ಡ ದೊಡ್ಡ ತೈಲ ಚಿತ್ರಗಳನ್ನು ಏರಿಸಿರುವರು.

ಚಕಿತ್ಸಾ ಏರ್ಪಾಡುಗಳು.

ಫ್ರಿನ್ಸ್ ಇಸಾಮಾಯಿಲ್ ದಾವುದ್ ಎಂಬವರ ಮೇಲ್ವಿಚಾರಣೆಯಲ್ಲಿ 15 ಮಂದಿಯವರೊಡಗೂಡಿದ (ಅವರಲ್ಲಿ 7 ಮಂದಿ ಡಾಕ್ಟರುಗಳು) ರೆಡ್ ಕ್ರಾಸ್ ಕ್ಯಿಸೆಂಟ್ ಸಹಾಯಕ ಮಂಡಳಿಯು ಏರ್ಪಟ್ಟಿದೆ. ಇವರು ಹಾರಾರಿನಲ್ಲಿ 600 ಮಂದಿಗೆ ಚಿಕಿತ್ಸೆಯನ್ನೀಯಲು ಬೇಕಾದ ಆಸ್ಪತ್ರೆಯನ್ನು ತೆರೆದು ಯುದ್ಧದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ನಡೆಸುವರು.

ಅಕ್ಟೋಬರು ತಾ. 21.

ದಕ್ಷಿಣದಲ್ಲಿ ಇಟಲಿಯ ಜಯ.

ಇಟಲಿಯ ವಿಮಾನಗಳು ಏಕ ಪ್ರಕಾರವಾಗಿ ಶಿಲ್ಲಾವೆ ಮತ್ತು ಗಾಗ್ಲರೆ ಮುಂತಾದ ಮುಖ್ಯ ಸ್ಥಳಗಳಿಗೆ ಬಾಂಬುಗಳನ್ನು ಸುರಿದು ವಿಪರೀತ ನಷ್ಟವನ್ನುಂಟುಮಾಡಿದವು. ಅಬಿಸೀನಿಯಾ ಸೈನಿಕರು ಮೆಶಿನ್‌ಗನ್‌ಗಳ ಮೂಲಕ ಅವುಗಳನ್ನು ಚದರಿಸಿದರು. ಹಾಗೂ ಆ ಸ್ಥಳಗಳು ಇಟಲಿಯ ವಶವಾದವು. ಅಲ್ಲಿನ ಒಗ್ಗಾಸ್ಮೆಕ್, ಅಲ್ಮೆರಿಯನ್ ಮೊದಲಾದ ಪ್ರದೇಶಗಳ ಪಾಳೆಯಗಾರರು ತಮ್ಮ ಆಯುಧಗಳನ್ನು ಇಟಲಿಯವರಿಗೊಪ್ಪಿಸಿ ಇಟಲಿಯವರ ಪಕ್ಷ ವಹಿಸಿರುವರು. ಅಲ್ಲದೆ ಟೈಗ್ರೆ ಪ್ರಾಂತದ 200 ಪಾದ್ರಿಗಳೂ, 15 ಮಸೀದಿಗಳೂ ಇಟಲಿಯವರ ಸೆರೆ ಬಿದ್ದವು.

ಡಗ್ಲೇರಿಯದ ಮೇಲೆ ಧಾಳಿ.

ಡಗ್ಲೇರಿಯದ ಮೇಲೆ ಇಟಲಿಯವರು ಬಾಂಬುಗಳನ್ನೆಸೆದು ಅನಂತರ ಸೈನ್ಯ ಮುತ್ತಿಗೆ ಹಾಕಿ ಆ ಪಟ್ಟಣವನ್ನು ಆಕ್ರಮಿಸಿದರು.

ಗುಲಾಮಗಿರಿಯನ್ನು ರದ್ದು ಮಾಡಿದರು.

ಇಟಲಿಯ ಸೈನ್ಯಾಧಿಕಾರಿ ಜನರಲ್ ಡಿಬೋನೋ ರವರು ಇಟಲಿಯ ಕೈಸೇರಿದ ಪ್ರಾಂತ್ಯಗಳಲ್ಲಿ ಗುಲಾಮಗಿರಿಯನ್ನು ರದ್ದು ಮಾಡಿದರು. ಟೈಗರ್ ಪ್ರಾಂತ್ಯದ ಸುಮಾರು 20 ಸಾವಿರಮಂದಿ ನಿವಾಸಿಗಳು ಈಗ ಗುಲಾಮಗಿರಿಯಿಂದ ಮುಕ್ತರಾದರು.

ರೋಗಗ್ರಸ್ಥರು ಹಿಂದಕ್ಕೆ.

ಇಟಲಿಯ ಸೈನ್ಯದಿಂದ 686 ಮಂದಿ ರೋಗಗ್ರಸ್ಥರನ್ನು ಹಡಗಿನಲ್ಲಿ ಹಿಂದಕ್ಕೆ ಕಳುಹಿಸಲಾಯಿತು. ಇವರಲ್ಲಿ ಬಹುತೇಕ ಮಂದಿ ಕೆಲಸಗಾರರು.

ಭಾರತೀಯ ಡಾಕ್ಟರರ ಸಹಾಯ.

ಡಾ ಜಹಾಂಗೀರ್ ಕಂಗಾ ಎಂಬ ಭಾರತೀಯರು ಲಂಡನ್‌ನಲ್ಲಿ ಡಾಕ್ಟರಾಗಿರುವರು. ಇವರು ಯುದ್ಧದಲ್ಲಿ ನಿಸ್ಸಹಾಯಕರಾಗಿ ಜಖಂಗೊಂಡ ಅಬಿಸೀನಿಯರಿಗೆ ಚಿಕಿತ್ಸೆ ನಡೆಸಲು ಸಿದ್ದನಿದ್ದೇನೆಂದು ಅಬಿಸೀನಿಯಾ ಸರಕಾರಕ್ಕೆ ತಿಳಿಸಿರುವರು. ಇವರ ವಿನಂತಿಯು ಮಾನ್ಯವಾದಲ್ಲಿ ಶೀಘ್ರದಲ್ಲೆ ಇವರು ಅಡ್ಡಿಸ್ ಅಬಾಬಕ್ಕೆ ತೆರಳಲಿರುವರು.

ಅಕ್ಟೋಬರ್ ತಾ. 22.

ಅಡೋವಾದಲ್ಲಿ 'ಸಿನೆಮ' ಪ್ರದರ್ಶನ

ಇಟಲಿಯವರು ಅಡೋವಾದಲ್ಲಿ ಮೂಕನಾಡುವ ಚಲನ ಚಿತ್ರದ (ಟಾಕಿ) ಮೂಲಕ ತಮ್ಮ ಯುದ್ಧ ಸನ್ನತೆಗಳ ಪ್ರದರ್ಶನ ಮಾಡುತ್ತಿರುವರು. ಇವೆಲ್ಲವೂ ಟೈಗರ್ ಭಾಷೆಯಲ್ಲಿ ಪರಿವರ್ತಿಸಲ್ಪಟ್ಟಿವೆ.

ಅಬಿಸೀನಿಯಾ ಮುಖಂಡರು ವಶವಾಗುವಿಕೆ.

ತಾವು ಸ್ವಾಧೀನಪಡಿಸಿಕೊಂಡಿರುವ ಪ್ರದೇಶಗಳಲ್ಲಿ ಅಬಿಸೀನಿಯ ಮುಖಂಡರುಗಳು ಇಟಲಿಯವರ ವಶವಾಗುತ್ತಿರುವರೆಂದೂ, ಇಟಲಿಯವರು ಅಲ್ಲಿಯ ನಿವಾಸಿಗಳಿಗೆ ಆಹಾರ ಸಾಮಗ್ರಿಗಳನ್ನು ಹಾಜುತ್ತಿರುವದು ಅವರಿಗೆ ತೃಪ್ತಿಯನ್ನುಂಟುಮಾಡುತ್ತಿದೆಯೆಂದೂ ಇಟಲಿಯ ಸೇನಾಪತಿಯ ವಾರ್ತೆ.

ಒಳದೇಶ.

ಈ ತಾ. 17ರಿಂದ 24 ರ ವರೆಗೆ ಮಡಿಕೇರಿಯಲ್ಲಿ 3.93 ಇಂಚು ಮಳೆಯಾಗಿದೆ.

ಚೀಫ್‌ಕಮಿಷನರವರು ಈ ತಾ. 22 ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದಿರುವರು. ಅವರು ಕೌನ್ಸಿಲು ವಿಷಯಗಳನ್ನು ಮುಗಿಸಿಕೊಂಡು ವಾಪಾಸು ಹೋಗಲಿರುವರು.

ಕೊಡಗು ಕೌನ್ಸಿಲಿನ ಜನರಲ್ ಸ್ಟಾಂಡಿಂಗ್ ಕಮಿಟಿಯ ವಿಷಯಗಳನ್ನು ಮುಗಿಸಿಕೊಂಡು ಈ ತಾ. 21 ರಲ್ಲಿ ಮಡಿಕೇರಿಯಲ್ಲಿ ನಡೆಯಿತು.

ಕೊಡಗು ನ್ಯಾಯವಿಧಾಯಕ ಸಭೆಯ ವಿಷಯಗಳು ಈ ತಾ. 30 ರಲ್ಲಿ ಮಡಿಕೇರಿ ಕೌನ್ಸಿಲು ಹಾಲ್‌ನಲ್ಲಿ ಪ್ರಾರಂಭವಾಗುವುದು.

ಮಾ. ರಾ. ಕುಟ್ಟಂಡ ಮುದ್ದಯ್ಯನವರು ಡಿ. ಪಿ. ಡಬ್ಲ್ಯು ಹೆಡ್ಡಾಫೀಸಿನ ಹೆಡ್ ಡ್ರಾಫ್ಟ್ಸ್‌ಮ್ಯಾನರಾಗಿ ಖಾಯಂ ಮಾಡಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ಇಂಡಿಯಾದ ಇತರ ಕಡೆಗಳಲ್ಲಿ ಆಚರಿಸಲ್ಪಡುವಂತೆಯೇ ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ಬರುವ ನವಂಬರು ತಾ. 2 ನೇ ಶನಿವಾರವು 'ಸಹಕಾರಿ ದಿನ'ವಾಗಿ ಆಚರಿಸಲ್ಪಡುವದೆಂದು ವರ್ತಮಾನ.

ಕಳೆದ ವಾರ ಹೆಬ್ಬಾಲೆಯಲ್ಲಿ ಹೊಸದಾಗಿ ಮೂವರಿಗೆ ಪ್ಲೇಗು ಅಂಟಿದೆಯೆಂದೂ, ಒಂದು ಮರಣ ಸಂಭವಿಸಿತೆಂದೂ, ಸುಂಟಿಕೊಪ್ಪದ ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿಯೂ, ಮಡಿಕೇರಿಯಲ್ಲಿಯೂ ಇಲಿಗಳು ಸಾಕಷ್ಟು ಸಂಖ್ಯೆಯಲ್ಲಿ ಕಾಣಿಸಿಕೊಂಡಿರುವದಾಗಿಯೂ ತಿಳಿಯಬರುತ್ತದೆ.

ಈ ತಾ. 17 ರಲ್ಲಿ ಸಾಯಂಕಾಲ 5:15 ಗಂಟೆಗೆ ಸರಿಯಾಗಿ ತಲಕಾವೇರಿಯಲ್ಲಿ ತುಲಾ ಸಂಕ್ರಮಣದ ತೀರ್ಥೋದ್ಭವವಾಯಿತು. 5 ನಿಮಿಷಗಳ ನಂತರ ಜೋರಾದ ಮಳೆ ಬಿತ್ತು. ಈ ಸಾರಿ ಜಾತ್ರೆಗೆ ಕಾಲು ಪಾಲು ಜನರು ಕಡಿಮೆಯೆಂದು ವರ್ತಮಾನ.

ಈಗ ಹಗಲು ಕಡಿಮೆಯಾಗಿರುವದರಿಂದ ಉದ್ಯೋಗಿಗರಿಗೂ, ವಿದ್ಯಾರ್ಥಿಗಳಿಗೂ ಸಾಯಂಕಾಲ ಆಟೋಟಗಳಿಗೆ ಸಾಕಷ್ಟು ಸಮಯ ಕೊಡಲು ಬರುವ ನವಂಬರು 10 ರಿಂದ 19 ನೇ ಜನವರಿ ಆಖೈರು ವರೆಗೆ ಮಡಿಕೇರಿ ಕೋರ್ಟು ಕಚೇರಿಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೂ, ಶಾಲೆಗಳಲ್ಲಿ ಬೆಳಿಗ್ಗೆ 9½ ಗಂಟೆಯಿಂದ ಸಾಯಂಕಾಲ 4 ಗಂಟೆಯ ವರೆಗೂ ಕೆಲಸ ನಡೆಸಬೇಕೆಂದು ಕಮಿಷನರು ಕಡಕುಂ ಮಾಡಿರುವರಾಗಿ ತಿಳಿಯಬರುತ್ತದೆ.

ಕಳೆದ ಸೆಪ್ಟೆಂಬರು ತಿಂಗಳಲ್ಲಿ ನಡೆದ ಮದ್ರಾಸು ಯೂನಿವರ್ಸಿಟಿಯ ಬಿ ಎ. ಪರೀಕ್ಷೆಯಲ್ಲಿ ಮೈ. ನೂರೆಯಂಡ ಮಾದಪ್ಪನವರೂ, ಮೆ. ಬಿ.ಎಸ್ ಪದ್ಮನಾಭನವರೂ ಪೂರ್ಣಯಾಗಿಯೂ, ಮೆ ಪಟ್ಟಮಾಡ ಯಂ. ಸೋಮಯ್ಯನವರು ಎರಡು ಭಾಗಗಳಲ್ಲಿಯೂ, ಮೈ. ಮಂಡೇಪಾಡ ಉತ್ತಪ್ಪನವರು ಬಿ. ಎಸ್ ಸಿ, ಪರೀಕ್ಷೆಯಲ್ಲಿಯೂ, ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರನ್ನು ಅಭಿನಂದಿಸುತ್ತೇವೆ.

ಮುದ್ರಾಸು ಗವರ್ನರವರು ಪತ್ನಿ ಪರಿವಾರ ಸಹಿತರಾ ಇದೇ ತಾ. 14ರಲ್ಲು ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜನ್ನು ಸಂದರ್ಶಿಸಿದ್ದಾಗ್ಗೆ ಅಲ್ಲಿನ ಕೊಡಗು ವಿದ್ಯಾರ್ಥಿಗಳು ಕೊಡಗಿನ ಕುಣಿತವನ್ನು ವಾದ್ಯದೊಡಗೂಡಿ ಆಡಿ ತೋರಿಸಿದರು. ಆಗ್ಗೆ ಕೊಡಗಿನ ಉಡುಪನ್ನು ಧರಿಸಿದ್ದಂಥ ವಿದ್ಯಾರ್ಥಿ ಮೆ ಬಿ. ಪಿ. ಜೋಯಪ್ಪನವರನ್ನು ಆ ಕಾಲೇಜಿನ ಪ್ರಿನ್ಸಿಪಾಲರು ಗವರ್ನರವರಿಗೂ, ಅವರ ಪತ್ನಿಯವರಿಗೂ ಪರಿಚಯ ಮಾಡಿರು. ಪ್ರಿನ್ಸಿಪಾಲರು ಕೊಡಗಿನವರ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳಿಕೊಟ್ಟರು. ಗವರ್ನರರು ಮತ್ತು ಪತ್ನಿಯವರು ಕೊಡಗಿನವರ ಉಡುಪನ್ನೂ, ಕುಣಿತವನ್ನೂ ನೋಡಿ ಸಂತೋಷಪಟ್ಟು, ಅವುಗಳನ್ನು ಶ್ಲಾಘಿಸಿದರೆಂದು ವರ್ತಮಾನ.

ಹರಿಜನರು ಹಿಂದೂ ಧರ್ಮವನ್ನು ತ್ಯಜಿಸುವರೇ

ಈ ತಾ. 13ರಲ್ಲಿ ಬೊಂಬಾಯಿ ಪ್ರಾಂತ್ಯದ ನಾಸಿಕ್ ಜಿಲ್ಲೆಯ ಯೆವಲ ಎಂಬಲ್ಲಿ ಬೊಂಬಾಯಿ ಪ್ರಾಂತೀಯ ಹರಿಜನ ಪರಿಷತ್ತು ಡಾ. ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಸೇರಿ, 'ಅಸ್ಪೃಶ್ಯರು ಹಿಂದೂ ಧರ್ಮವನ್ನು ತ್ಯಜಿಸಿ ತಮಗೆ ಸರಿಸಮಾನತೆಯನ್ನು ಒದಗಿಸುವ ಬೇರೆ ಯಾವ ಮತವನ್ನಾದರೂ ಸ್ವೀಕರಿಸಬಹುದು' ಎಂಬ ಠರಾವನ್ನು ಸರ್ವಾನುಮತದಿಂದ ಪಾಸು ಮಾಡಿದರು. ಆಗ್ಗೆ ಅಧ್ಯಕ್ಷರಾದ ಅಂಬೇಡ್ಕರರು 'ನಾನು ಅಸ್ಪೃಶ್ಯನಾಗಿ ಹುಟ್ಟಿದ್ದು ದುರ್ದೈವ, ಆದರೆ ನಾನು ಎಂದೂ ಹಿಂದುವಾಗಿ ಸಾಯುವುದಿಲ್ಲ' ಎಂದು ನುಡಿದರು. ಅಸ್ಪೃಶ್ಯ ಹಿಂದುಗಳು ಇನ್ನಾದರೂ ಕಣ್ಣು ತೆರೆಯುವರೇ ?

ಪ್ರಕಟಣೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ "P. V. S" ಬೇಡಿ ತಯಾರಿಸುವ ಮಂಗಳೂರು ರಾಡಿಯಲ್ ಬೈಲಿನಲ್ಲಿರುವ ಪುತ್ತು ವೈಕುಂಟ ಶೇಟರವರ ಹೆಸರಿನ 1427/1933ರ ನುಬರಿನ ರಿಜಿಸ್ಟರಾದ ಟ್ರೇಡ್ ಮಾರ್ಕ್‌ನ್ನು ಉಪಯೋಗಿಸಿಕೊಂಡು, ಕಪ್ಪು ತರಗತಿಯ ಬೀಡಿಗಳನ್ನು ಪುತ್ತು ವೈಕುಂಟ ಶೇಟರ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಸೀಲ್ ಇವುಗಳಿಂದ ಮುದ್ರಿತವಾದ ಸೈಜ್ಞೆ ಕಾಗದದಲ್ಲಿ ಸುತ್ತಿ ಕೊಡಗಿನ ಕೆಲವು ಭಾಗಗಳಲ್ಲಿ ಕೆಲವು ವರ್ತಕರು ಸೇರಿ ವ್ಯಾಪಾರ ಮಾಡುವ ವಿಷಯ ಪುತ್ತು ವೈಕುಂಟ ಶೇಟರಿಗೆ ತಿಳಿಬಂದಿರುವದರಿಂದ ಪುತ್ತು ವೈಕುಂಟ ಶೇಟರ ಬೀಡಿಗಳ ಸೋಲ್ ಏಜಂಟರಾಗಿ ಮಡಿಕೇರಿಗೂ, ಕೊಡಗಿನ ಎಲ್ಲಾ ವ್ಯಾಪಾರಸ್ಥರಿಗೂ "P. V. S." ಬೀಡಿಗಳನ್ನು ಸಪ್ಲೈ ಮಾಡುವ ಮಡಿಕೇರಿ ಚೌಕಿ ಬಳಿ, ಪಯನೀರ್ ಬೋಡಿನಲ್ಲು "ಎಜೆನ್ಸಿ ಅಂಗಡಿ ಇಟ್ಟಿರುವ ಮೂಪಿಲ್ಲೆ ಮೂಮು ಬ್ಯಾರಿಗಳಿಂದ ಪುತ್ತು ವೈಕುಂಟ ಶೇಟರ "P. V. S." ಬೀಡಿಗಳನ್ನು ಕೊಡಗಿನಲ್ಲಿ ಚಿಲ್ಲರೆ ಚಿಲ್ಲರೆಯಾಗಿ ಬಿಕ್ರಿ ಮಾಡತಕ್ಕ ಎಲ್ಲಾ ವ್ಯಾಪಾರಸ್ಥರು ಕೊಂಡುಕೊಳ್ಳತಕ್ಕದ್ದು. ಸದರಿ ಬೀಡಿಗಳನ್ನು ವ್ಯಾಪಾರಸ್ಥರಿಗೆ ಕೊಡಗಿನಲ್ಲಿ ಸಪ್ಲೈ ಮಾಡಲಿಕ್ಕೆ ಇನ್ನಾರಿಗೂ ಅಧಿಕಾರವಿರುವದಿಲ್ಲ. ಹೀಗಿರುವದರಿಂದ ಇನ್ನಾರಿಂದ ಸದರಿ ಬೀಡಿಗಳನ್ನು ಕೊಂಡುಕೊಂಡು ಮಾರಾಟಕ್ಕಿಡುವ ವ್ಯಾಪಾರಸ್ಥರು ಮತ್ತು ಅವರಿಗೆ ಹಾಗೆ ಬೀಡಿಗಳನ್ನು ಸಪ್ಲೈ ಮಾಡುವ ಮನುಷ್ಯರು ಕೂಡ ಕ್ರಿಮಿನಲ್ ಶಿಕ್ಷೆಗೆ ಪಾತ್ರರಾಗುವುದಲ್ಲದೆ, ಪುತ್ತು ವೈಕುಂಟ ಶೇಟರಿಗಾಗುವ ಇತರ ಎಲ್ಲಾ ನಷ್ಟಕ್ಕೂ ಕೂಡ ಜವಾಬ್ದಾರರಾಗುತ್ತಾರೆಂತ ಈ ಮೂಲಕ ಖಂಡಿತ ತಿಳಿಸಿದೆ.

ಐ. ಸಿ. ಸುಬ್ಬಯ್ಯ,
ಪುತ್ತು ವೈಕುಂಟ ಶೇಟರ ಎಡ್ಮಿನಿಸ್ಟ್ರೇಟರ್.
25—10—1935.

ಸಭೆಯ ವರದಿ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಮಂಗಳೂರು ಕೊಡವರ ಸಂಘ

ಅಯ್ಯೋ,

ಈದೇ ತಾರೀಕು 10ರಲ್ಲು ಮಂಗಳೂರಿನ ಕೊಡಗರು ಸೇರಿ ಸೈಂಟ್ ಎಲೋಸಿಯಸ್ ಕಾಲೇಜಿನಲ್ಲು ಕಾವೇರಿ ಸಂಕ್ರಮಣ ಹಬ್ಬದ ನಿಮಿತ್ತವಾಗಿ ಒಂದು ಕೂಟವನ್ನು ಮೆಸೋವಿಯುಂಡ ತನ್ಮೂಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿಸಿ ಸಿದರು.

ಅಧ್ಯಕ್ಷರು ಕಾವೇರಿ ಸಂಕ್ರಮಣ ಹಬ್ಬದ ಚರಿತ್ರೆಯನ್ನು ವಿವರಿಸಿದರು. ಸೆಕ್ರೆಟರಿಯವರು ಗತ ಸಭೆಯ ವರದಿಯನ್ನು ಓದಿದರು. ಅಲ್ಲಿಂದ ಅಧ್ಯಕ್ಷರು ನೊಸ್ಸೆ ತಾನೇ ಶಿವಾಧೀರಾದಂಡ್ಲ ಮೆ. ನೆವಂಡ ಅಪ್ಪಚ್ಚನವರ ಗುಣ ಕಥನವನ್ನು ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂಬದಾಗಿ ಎಲ್ಲರೂ ಎದ್ದು ನಿಂತು ದೇವರನ್ನು ಧ್ಯಾನಿಸಿದಲ್ಲದೆ ಅವರ ಕುಟುಂಬಕ್ಕೆ ಈ ಸಂಘದವರ ವ್ಯಸನ ಸೂಚಿಸುವುದಕ್ಕಾಗಿ ಪತ್ರ ಬರೆಯುವಂತೆ ಸೆಕ್ರೆಟರಿಯವರಿಗೆ ಹೇಳಲಾಯಿತು ನಂತರ ಮೆ. ಗುಮ್ಮಟ್ಟಿರ ಗಣಪತಿಯವರು ಮೆ. ಅಪ್ಪಚ್ಚನವರು ವ್ಯಾಪಾರಾರ್ಥ ಗುಟ್ಟನ್ನು ಅಂತು ಹೇಗೆ ಜಯಶೀಲರಾದರೆಂಬುವುದನ್ನು ಕುರಿತು ಸಂಕ್ಷೇಪವಾಗಿ ಹೇಳಿದರು. ಕಡೆಗೆ ಸೆಕ್ರೆಟರಿಯವರು ಒಂದೆರಡು ಮಾತಿನಿಂದ ಅಲ್ಲಿ ನೆರೆದಿದ್ದವರನ್ನೆಲ್ಲಾ ವಂದಿಸಿ ವಿಟಿಂಗನ್ನು ಬರ್ಕಾಸ್ತು ಮಾಡಿದರು.

'ಮಂಗಳೂರು ಕೊಡಗ.'

ಗಂಧದ ಕರಡು ರೂಲುಗಳು.

ಅಯ್ಯಾ ಸುಬ್ಬಂಣಯ್ಯನವರೇ,

ಗಂಧದ ಕರಡು ರೂಲುಗಳನ್ನು ವಿರೋಧಿಸಿ ತಾವು ಚೀಫ್ ಕಮಿಷನರ್ ಸಾಹೇಬರವರಿಗೆ ಬರೆದ ಪತ್ರವನ್ನು ಸರ್ವರ ತಿಳುವಳಿಕೆ ಬಗ್ಗೆ ಪತ್ರಿಕೆಯಲ್ಲು ಪ್ರಕಟಿಸಿದಕ್ಕೆ ಕೃತಜ್ಞನಾಗಿ, ನನಗೆ ತೋರಿ ಬಂದ ವಿಷಯವನ್ನು ತಮ್ಮ ಅವಗಾಹನೆಗೆ ತರಲು ಈ ಮೂಲಕ ಪ್ರಕಟಪಡಿಸುವುದಂಲ್ಲಿ ಕುಂದು ಕೊರತೆಗಳು ಕಂಡು ಬಂದರೆ ಕ್ಷಮಿಸಬೇಕಾಗಿ ವಿನಂತಿ.

ಆಕ್ಷೇಪಣೆ ಕಲಂ 1ರಲ್ಲು ಉ. ಕೊಡಗು ತಾಲ್ಲೋಕು ಜನರು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವದಲ್ಲದೆ ಇಂಗ್ಲಿಷ್ ತಿಳಿದವರು ಬಹಳ ಕಡಿಮೆ ಎಂತ ಕಾರಣ ಕೊಡುವ ಅವಶ್ಯವಿಲ್ಲವೆಂದು ತೋರುತ್ತೆ. ಸರ್ಕಾರದವರು ಹೊರಡಿಸುವ ಪ್ರತಿನೂಸು ಕಾಯಿದೆಗಳು ದೇಶದ ಪ್ರಯೋಜನಕ್ಕಾಗಿ ಎಂದು ನಿರಂಕುಶವಾಗಿ ಮಾಡುವುವುಗಳಾಗಿವೆ. ಆದುದರಿಂದ ಅವುಗಳನ್ನು ನ್ಯಾಯವಾಗಿ ದೇಶಭಾಷೆಯಲ್ಲಿ ಪ್ರಕಟಿಸಬೇಕಾಗಿದೆ. ಆದರೆ ಸರ್ಕಾರದವರು ತಮ್ಮ ಅನುಕೂಲಕ್ಕಾಗಿ ಜನಸಾಮಾನ್ಯರಲ್ಲಿ ಕೂಡಿ ಬಿಲ್ಲದ ತಮ್ಮ (ಇಂಗ್ಲಿಷ್) ಭಾಷೆಯಲ್ಲಿ ಪ್ರಕಟಿಸುವುದರಿಂದ ನ್ಯಾಯವಾದ ಅರ್ಥ ಮಾಡಿ ತಿಳಿದುಕೊಳ್ಳುವದು ಸುಲಭ ಸಾಧ್ಯವಲ್ಲದ ಕಾರಣ ದೇಶೀಯರು ತಪ್ಪು ಅಭಿಪ್ರಾಯಗಳಿಂದ ತೊಂದರೆಗೂ, ಕಷ್ಟ ನಷ್ಟಗಳಿಗೂ ಒಳಗಾಗುತ್ತಲಿದ್ದಾರೆ. ಇದು ಸರ್ಕಾರಕ್ಕೆ ತಿಳಿದ ವಿಷಯವಾಗಿದ್ದರೂ ಅದನ್ನೇ ಜಾರಿಯಲ್ಲಿಟ್ಟುಕೊಂಡು ಮುಂದುವರಿಸುತ್ತಾ ಇರುವದರಲ್ಲಿ ನ್ಯಾಯವಿಲ್ಲ. ಗಜೆಟಿನಲ್ಲು ಪ್ರಕಟಪಡಿಸಿದ ಮಾತ್ರಕ್ಕೆ ಸರ್ವರೂ ತಿಳಿದುಕೊಳ್ಳಬೇಕೆಂಬ ಅಭಿಪ್ರಾಯದಿಂದ ಸರ್ವರೂ ಗಜೆಟನ್ನು ಕ್ರಯ ಕೊಟ್ಟು ತೆಗೆದು ಕೊಳ್ಳಬೇಕೆಂಬ ನಿರ್ಬಂಧಪಡಿಸುವಂತಾಯಿತೇ ಹೊರತು ರಾಜಧರ್ಮಾನುಸಾರ ದೇಶೀಯರ ತಿಳಿವಳಿಕೆಗೆ ತಂದಂತಾಗಲಿಲ್ಲ. ಇನ್ನಾದರೂ ಇಂಥಾ ಪ್ರತಿಗಳನ್ನು ಕನ್ನಡದಲ್ಲಿ (ದೇಶ ಭಾಷೆಯಲ್ಲಿ) ಅಚ್ಚು ಹಾಕಿಸಿ ಕಾಲವಿಳಂಬವಾಗದಂತೆ ಸಂಬಂಧಪಡುವ ಪ್ರತಿಯೊಬ್ಬನ ತಿಳುವಳಿಕೆಗೆ ತರುವಂತೆ ತಕ್ಕ ಏರ್ಪಾಡು ಮಾಡದೆ ಹೋಗುವದಂಲ್ಲಿ ಸಾಕಷ್ಟು ನ್ಯಾಯಗಳೀ ಧರ್ಮವಾಗಲೀ ತೋರುವುದಿಲ್ಲವೆಂತ ಬರೆಯಬೇಕಿತ್ತು.

ಸಲಹೆ ಕಲಂ 2ರಲ್ಲು ಸರ್ಕಾರದವರು ಬೋನಸು ಕೊಡುವ ಅವಧಿಯನ್ನು ಮುಂದುವರಿಸುತ್ತ ಇರುವುದರಲ್ಲಿ ಸಾಕಷ್ಟು ನ್ಯಾಯವಿಲ್ಲವೆಂತಲೂ, ಅವಧಿಯು 1937ನೇ ಇಸವಿಯಿಂದಾದುದರಿಂದ ಸರ್ಕಾರದವರು ನುತ್ತು ಹಿಡುವಳಿದಾರರು ನ್ಯಾಯಕ್ಕೂ ಧರ್ಮಕ್ಕೂ ಅನುಸಾರ ಒಂದು ತೀರ್ಮಾನಕ್ಕೆ ಬರುವ ವರೆಗೆ ಹಿಡುವಳಿಯಲ್ಲು ಇರುವ ಗಂಧದ ಮರಗಳನ್ನು ಎಂದಿನಂತೆ ಕಿತ್ತು ತೆಗೆದುಕೊಂಡು ಹೋಗುವುದನ್ನು ಬಾಕಿ ಮಾಡಬೇಕೆಂತಲೂ ಕೇಳಿಕೊಳ್ಳಬೇಕಿತ್ತು. ತಡವಾದರೂ ಒಡನೆ ಬರೆಯುವುದು ಒಳ್ಳೆಯದೆಂತ ಅಭಿಪ್ರಾಯಪಡುತ್ತೇನೆ.

ಕೊಡಂದೆರ ಜಂಗಪ್ಪ.

ತಲಕಾವೇರಿ ಜಾತ್ರೆ.

ಅಯ್ಯಾ,

ಕೊಡಗಿನಲ್ಲಿ ಅತಿ ಪ್ರಾಮುಖ್ಯವಾದ ಜಾತ್ರೆಯೆಂದರೆ ತಲಕಾವೇರಿ ಸಂಕ್ರಮಣದ ತಲಕಾವೇರಿ ಜಾತ್ರೆಯಾಗಿದೆ. ಈ ಜಾತ್ರೆಗೆ ಕೊಡಗಿನ ಎಲ್ಲಾ ಮೂಲೆಗಳಿಂದ ಭೂತ್ಯವಲ್ಲದ ಕ್ಷೀಣ ಹಿಂದೂಸ್ಥಾನಧ ಹಲವು ಕಡೆಗಳಿಂದ ಯಾತ್ರಿಕರು ಬರುತ್ತಾರೆ. ಈ ಧೇವ್ಷಸ್ಥಾನದ ಆಡಳಿತವು ಒಂದು ಸುವ್ಯವಸ್ಥಿತವಾದ ಕಮಿಟಿಯಿಂದ ನಡಿಸಲ್ಪಡುತ್ತದೆ. ಆದರೆ ಈ ಜಾತ್ರೆಗೆ ಹೋಗುವ ಯಾತ್ರಿಕರ ಅನುಭವನೆಂಬುದನ್ನು ಸ್ವಲ್ಪ ವಿವರಿಸಲಿಚ್ಛಿಸುತ್ತೇನೆ.

ಭಾಗಮಂಡಲದಿಂದ ತಲಕಾವೇರಿಗೆ ಸುಮಾರು ಮೂರು ಮೈಲು ದೂರವಿದೆ. ಬುಡದಿಂದ ತಲೆಯ ವರೆಗೂ ಬೆಟ್ಟ ಹತ್ತಿ ಹೋಗಬೇಕಾಗಿದೆ. ಈ ದಾರಿಯ ಕಷ್ಟ ಸ್ಥಿತಿಯು ವರ್ಣನಾತೀತವಾಗಿದೆ. ದಾರಿಯುದ್ದಕ್ಕೂ ಕಲ್ಲು ಒಂಡೆಗಳೂ, ಗುಂಡಿ ಮೊಟ್ಟೆಗಳೂ ವಿಪರೀತ ಇವೆ. ಈ ದಾರಿಯಲ್ಲಿ ಹಗಲು ನಡೆಯುವುದೇ ಒಂದು ಕಠಿಣ ಪರೀಕ್ಷೆ ಆಗಿದೆ. ಅಂದ ಮೇಲೆ ಈ ದಾರಿಗಾಗಿ ರಾತ್ರಿ ಕತ್ತಲೆಯಲ್ಲಿ ನಡೆಯುವುದು ಎಷ್ಟು ಪ್ರಯಾಸವೆಂಬುದನ್ನು ಹೇಳಬೇಕಾಗಿಲ್ಲ. ಅದರೊಂದಿಗೆ, ವಾಡಿಕೆಯಂತೆ ಜಾತ್ರೆಯ ಕಾಲದಲ್ಲಿ ಮಳೆಯೂ ಇದ್ದೇ ಇರುತ್ತದೆ. ಮಳೆ ನೀರು ಬಿದ್ದ ಮೇಲೆ ಆ ರಸ್ತೆಗಾಗಿ ಬರುವದೆಂದರೆ ಯಮನ ಶಿಕ್ಷೆಯೆಂದೇ ಹೇಳಬೇಕು. ರಾತ್ರಿ ತಲಕಾವೇರಿಯಿಂದ ಇಳಿದು ಬರುವಾಗ್ಯ ಅಂದ್ರಗಳನ್ನು ಹಿಡಿದುಕೊಂಡು ಬಂದವರಲ್ಲೂ ಹಲವು ಗಂಡಸರು, ಹೆಂಗಸರು, ಮಕ್ಕಳು ಕಾಲು ಜಾರಿ ಬಿದ್ದರೆಂದ ಮೇಲೆ ದೀಪ ಇಲ್ಲದೆ ಬರಬೇಕಾದವರ ಪಾಡೇನೆಂಬುದನ್ನು ಬರೆಯುವುದಕ್ಕಿಂತ ಊಹಿಸಿಕೊಳ್ಳುವುದು ಸುಲಭ. ಮುಜ್ರಾಯಿ ಇಲಾಖೆಯವರೂ, ಡಿಸ್ಟ್ರಿಕ್ಟ್ ಬೋರ್ಡಿನವರೂ, ಸ್ಥಳೀಯ ಸರ್ಕಾರದವರೂ ಈ ರಸ್ತೆಯ ದುರಸ್ತಿಗೆ ತಕ್ಕ ನಿಗಕೊಡದೆ ಇರುವುದು ದೊಡ್ಡ ಅನ್ಯಾಯ. ಅಲ್ಲದೆ ದೇವಸ್ಥಾನ ಕಮಿಟಿಯವರು ಜಾತ್ರೆಯ ಕಾಲದಲ್ಲಿ ಈ ರಸ್ತೆಯಲ್ಲಿ ಕೆಲವು ಪೆಟ್ರೋಮೆಕ್ಸ್ ದೀಪಗಳನ್ನಿಡುವ ಏರ್ಪಾಡು ಮಾಡುವುದು ಅಗತ್ಯವಾಗಿದೆ.

ಯಾತ್ರಿಕರಿಗಿರುವ ಇನ್ನೊಂದು ತೊಂದರೆ ಯಾವುದೆಂದರೆ—ಪುಣ್ಯತೀರ್ಥ ಸ್ನಾನಕ್ಕಾಗಿ ಬರುವ ಸಾವಿರಗಟ್ಟಿ ಜನರಿಗೆ ರಾತ್ರಿ ಉಳಕೊಳ್ಳಲು ಸಾಕಷ್ಟು ಸ್ಥಳವಿಲ್ಲದೆ ಇರುವುದು. ಮಳೆಯಲ್ಲಿ ಹೆಂಗಸರು, ಮಕ್ಕಳು ರಸ್ತೆಯಲ್ಲಿ, ರಾತ್ರಿಯನ್ನು ಕಳೆಯುವುದು ಅತಿಶೋಚನೀಯ ದೃಶ್ಯವಾಗಿದೆ. ಇದಕ್ಕಾಗಿ ಛತ್ರಗಳನ್ನು ಕಟ್ಟಿಸುವುದು ಅತ್ಯವಶ್ಯ ಈಗಕ್ಕೆ ತಾತ್ಕಾಲಿಕ (ಹಲ್ಲು ನೂಡಿನ) ಚಪ್ಪರಗಳನ್ನಾದರೂ ಹಾಕಿಸುವುದು. ಮುಜ್ರಾಯಿ ಇಲಾಖೆಯವರ ಧರ್ಮವಾಗಿದೆ. ಖಾಯಂ ಛತ್ರ ಕಟ್ಟಿಸಲು ಧರ್ಮಿಷ್ಠರಾದ ಐಶ್ವರ್ಯವಂತರ್ಯಾರಾದರೂ ಮುಂದೆ ಬಂದರೆ ಉತ್ತಮವಾಗಿತ್ತು. ಇಲ್ಲವಾದರೆ ಮುಜ್ರಾಯಿ ಇಲಾಖೆಯವರು—ವಸತಿಗೆ ತಲೆಯೊಂದರ ಒಂದಾಣೆಯಂತೆ ಬಾಡಿಗೆ ಎತ್ತಿಯೋ, ಅಥವಾ ಪ್ರತಿಯೊಬ್ಬ ಯಾತ್ರಿಕರಿಂದ ಒಂದಾಣೆ ಟೋಲ್ ಫೀ ವಸೂಲು ಮಾಡಿಯಾದರೂ ಜನರಿಗೆ ಉಳಕೊಳ್ಳಲು ಕಟ್ಟಡವನ್ನು ಮಾಡಿಕೊಡುವುದು ಅತ್ಯಗತ್ಯವಾಗಿದೆ.

ಈ ಸಾರಿಯ ಜಾತ್ರೆಯಲ್ಲಿ ಮತ್ತೊಂದು ವಿಶೇಷವೇನೆಂದರೆ—ಯಾತ್ರಿಕರ ಸಂಖ್ಯೆಯು ಕಾಲು ಪಾಲಷ್ಟು ಕಡಿಮೆ; ಅದರಲ್ಲಿ ಮುಖ್ಯವಾಗಿ ಹೊರ ಪ್ರಾಂತ್ಯಗಳಿಂದ ಬಂದವರು ಒಹು ಕಡಿಮೆ ಆದರೂ ದೇವಸ್ಥಾನ ಕಮಿಟಿಯವರು ಪಡಿ ಕೊಟ್ಟ ಅಕ್ಕಿಯ ಪರಿಮಾಣ ಹೆಚ್ಚೆಂದು ಸುದ್ದಿ! ಈ ಅಕ್ಕಿಯೂದರೋ ಬರ್ಮಾದ ಸುಂಣ ಅಕ್ಕಿಯಂತೆಯೇ ಇತ್ತು. ಅದರಲ್ಲಿ ಕ್ರಿಮಿಗಳ ಗೂಡುಗಳು ಸಾಕಷ್ಟು ಇದ್ದವು. ಇದು ಮಂಗಳೂರಿನಿಂದ ಲಾರಿಯಲ್ಲಿ ತರಿಸಿದ ಅಕ್ಕಿಯೆಂದ ತಿಳಿದು ಬಂತು. ಇಷ್ಟರ ವರೆಗೆ ಕೊಡಗಿನ ಅಕ್ಕಿಯೇ ಕೊಡಲ್ಪಡುತ್ತಿತ್ತು. ಈ ಸಾರಿ ಮಂಗಳೂರಿನಿಂದ ಅಕ್ಕಿ ತರಿಸಲು ಕಾರಣವೇನೋ ತಿಳಿಯದು. ಕೊಡಗಿನ ಬಡ ರೈತರು ಬೆಳೆಸಿದ ಭತ್ತದಿಂದ ಕುಟ್ಟಿ ಮಾಡಿದ ಅಕ್ಕಿಗಿಂತ ಸರ ಊರಿನಿಂದ ತರಿಸಿದ ಗಿರಣಿಯ ಅಕ್ಕಿಯು ಮೇಲಾಯಿತೇ? ಇದಕ್ಕೆ ಜವಾಬ್ದಾರರ್ಯಾರೆಂದು ಗೊತ್ತಿರುವವರು ತಿಳಿಸುವಿರಾ?

ಇನ್ನಾದರೂ ಮುಜ್ರಾಯಿ ಇಲಾಖೆಯವರು ಈ ಜಾತ್ರೆಗೆ ಬರುವ ದೇವಭಕ್ತ ಯಾತ್ರಿಕರ ಅನುಕೂಲತೆಗೆ ತಕ್ಕ ನಿಗಕೊಡುವರಾಗಿ ಆಶಿಸುವ.

'ಯಾತ್ರಿಕ'

ಕೊಡಗು ವೀರಶೈವ ವಿದ್ಯಾನಿಧಿ ಸಂಘದ ವೈಸ್ ಪ್ರೆಸಿಡೆಂಟರಾದ ಮೆ. ಹೆಚ್. ಡಿ. ಚನ್ನವಲ್ಲಪ್ಪ ಎಂ. ಎಲ್. ಸಿ. ಯವರಲ್ಲಿ ವಿನಂತಿ.

ಅಯ್ಯಾ,

ತಾವು ಮೇಲ್ಕಂಡ ಸಂಘದ ವೈಸ್ ಪ್ರೆಸಿಡೆಂಟರಾಗಿ ಕೆಲವ್ಯಕಾಲ ಕಳೆದು ಹೋದವು. ತಮ್ಮಂಥ ಮತೋದ್ಧಾರಕರು ಆದ ಮಹನೀಯರೇ, ಇಂಥಾ ಸಂಘದ ಊರ್ಜಿತ ಸುವ್ಯವಸ್ಥೆಗೆ ದಾರಿ ತೋರಿಸದೆ ನಿರ್ಲಕ್ಷ್ಯದಲ್ಲಿರುವುದನ್ನು ನೋಡಿದರೆ ತುಂಬಾ ವಿಷಾದನೆನಿಸದೆ ಇರಲಾರದು. ಹಾಗೆ ತಮ್ಮ ಅಂತರ್ಯ ಭಾವದಲ್ಲಿ ಮೇಲ್ಕಂಡ ಸಂಘಕ್ಕೆ ಒಂದು ತೆರನಾದ ಜೀವಕಳೆಯನ್ನು ಕೊಡುವುದಾಗಿದ್ದರೆ 'ಕೊಡಗು' ಪತ್ರಿಕೆಯ ತಾರೀಕು 20—9—'35ರ ಮತ್ತು 11—10—'35ರ ದಿನ ಪೂಣಯ್ಯನವರ ಶಿರೋ ಲೇಖನಕ್ಕೆ ತಾವೂ ಮತ್ತು ಈ ಸಂಘದ ಪ್ರೆಸಿಡೆಂಟರೂ, ಹಾಗೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರೂ ಮತ್ತು ಗೌರವ ಬೆಂಚ್ ಮೇಜಿಸ್ಟ್ರೇಟರೂ ಆದ ಮೆ. ಸಿ. ಹೆಚ್. ಪೂ. ಅವರೇ ಗಾಡರೂ ಕೂಡಿ ವಿಚಾರಿಸಿ ಏನಾದರೂ ಒಂದು ತೀರ್ಮಾನದ ಸಮಜಾಯಿಸಿಗೆ ಕೊಡದೆ ಇರುತ್ತಿರಲಿಲ್ಲ.

ಪ್ರಸಿದ್ಧ ಔಷಧಗಳು

ಪ್ರಸಿದ್ಧಿ ಹೊಂದಿದ ತೀಫ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋ-ಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿ ನಿಂದುಂಟಾಗುವ ಹೊಟ್ಟೆ ನೋವು, ಸೊಂಟನೋವು, ನಿತ್ರಾಣ, ಬೆನ್ನು ಮೂಳೆನೋವು, ಸೋಮರೋಗ, ಕುಸುಮ ಜಾಡ್ಯ ವಗೈರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭರಕ್ಷಿಣಿಯು.

ದೊಡ್ಡ ಕುಪ್ಪಿ 2—8—0.
ಅರ್ಧ ಕುಪ್ಪಿ 1—6—0.

ನವರತ್ನ
ಮಾಕ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ ಅರುಚಿ ನಿತ್ರಾಣ ವಗೈರೆ ಪರಿಹರಿಸಿ, ದೇಹಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0.

ವಿ. ಸೂ:—ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.
52—25

ನವರತ್ನ ಫಾರ್ಮಸಿ,

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳ ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,
210, Abdulrehman Street, BOMBAY 3.
26—5

ತಮ್ಮೀರ್ವರಂಥ ದೇಶೋದ್ಧಾರಕರೂ, ಮತೋದ್ಧಾರಕರೂ ಆದ ತಮ್ಮ ಕಾಲದಲ್ಲೇ ನೆಟ್ಟ ಈ ಸಸಿಗೆ ಮುಂದೆ ಯಾವ ಆಶ್ರಯವೂ ಇಲ್ಲದಂತೆ ಮಾಡಿಬಿಟ್ಟರೆಂದರೆ ಅದು ತಮ್ಮ ಭಾಗದ ಕರ್ತವ್ಯ ಶೂನ್ಯತೆಯೂಗಲಾರದೇ ? ನಿಮ್ಮೀರ್ವರ ಆಡಳಿತೆಯಲ್ಲಿ ಮೇಲ್ಕಂಡ ಸಂಘವನ್ನು ನಿರ್ನಾಮ ಮಾಡಲು ಪ್ರಯತ್ನಿಸಿದ್ದಾದರೆ ಸಮಾಜಕ್ಕೆ ಒಂದು ಶಿರನಾಡ ಹಾನಿ ಎಂದು ಭಾವಿಸಬೇಕಾಗುತ್ತದೆ. .... ಬರೆಯುತ್ತಾ ಹೋದರೆ ಎಷ್ಟೋ ಕಾರಣಗಳು ಇವೆ. ಆದರೆ ಇನ್ನು ಮುಂದೆ ಮೇಲ್ಕಂಡ ಸಂಘದ ಒಂದು ಮಹಾ ಸಭೆಯನ್ನು ಶೀಘ್ರದಲ್ಲಿಯೇ ಕರೆದು ಸದರಿ ಫಂಡನ್ನು ಬ್ಯಾಂಕಿನಲ್ಲಿರಿಸಿ ಅದರ ಬಡ್ಡಿಯಿಂದ ಲಾದರೂ ಬಡ ವಿದ್ಯಾರ್ಥಿಗಳಿಗೆ ವೇತನ ದೊರೆಯುವಂತೆ ಮಾಡುವುದಲ್ಲದೆ ತಾ. 11—10—'35ರ 'ಕೊಡಗು' ಪತ್ರಿಕೆಯಲ್ಲು ಪ್ರಿಂಟಾಗಿರುವ ಜಿ. ಸಂಣಯ್ಯನವರ ಲೇಖನಕ್ಕೆ ಕೂಡಲೆ ಪತ್ರಿಕೆ ಮೂಲಕ ಉತ್ತರ ಕೊಡುವಿರಾಗಿ ನಂಬುತ್ತೇನೆ.

'ಮತ ಬಾಂಧವ.'

ಇದೆಂಥಾ ಹುಕುಂ ?

ಅಯ್ಯಾ,

'ಕೊಡಗಿನಲ್ಲಿ ಯಾವದೂ ಸಾಧ್ಯವೇ' ಎಂಬ ಹೇಳಿಕೆಯನ್ನು ನಾನು ಕೇಳಿದ್ದೆನು. ಆದರೆ ಅದನ್ನು ನಂಬಲು ಸಾಧ್ಯವಾಗಿರಲಿಲ್ಲ. ಈಗ ಅದಕ್ಕೆ ನಾನೂ ತಲೆಬಾಗುವಂತೆ ಮಾಡಿದ ವಿಶೇಷ ಸಮಾಚಾರ ಒಂದನ್ನು ವಾಚಕರ ಮುಂದಿಡಲು ಇಚ್ಛಿಸುತ್ತೇನೆ.

ಈ ತಾ. 17ನೇ ಗುರುವಾರ ತಲಕಾವೇರಿಯಲ್ಲಿ ತುಲಾ ಸಂಕ್ರಮಣ ಸಡೆಯುತಷ್ಕೆ. ಅಲ್ಲಿಗೆ ಹೋಗುವ ಉದ್ದಿಶ್ಯ ನಾನು ಆ ದಿನ ಬೆಳಿಗ್ಯೆ 11½ ಗಂಟೆಗೆ ಬಸ್ಸ್ ಸ್ಟೇಂಡಿಗೆ ಹೋದೆನು. ಆದರೆ ಆ ದಿನ ಬೆಳಿಗ್ಯೆ 11½ ಗಂಟೆಯಿಂದ ಸಾಯಂಕಾಲ 3½ ಗಂಟೆಯ ವರೆಗೆ ಯಾವ ಬಸ್ಸೂ ಮಡಿಕೇರಿಯಿಂದ ಭಾಗಮಂಡಲ್ಕೆಕೆ ಹೋಗಕೂಡದೆಂದು ಪೊಲೀಸಿನವರ ಹುಕುಂ ಆಗಿದೆಯೆಂದು ತಿಳಿಯಬಂತು. ಇದಕ್ಕೆ ಕಾರಣವೇನೆಂದು ವಿಚಾರಿಸಿದಾಗ್ಯೆ—ಕಮಿಷನರವರು ಭಾಗಮಂಡಲದಿಂದಮಧ್ಯಾಹ್ನ 1½ ಗಂಟೆಗೆ ಹೊರಟು 3½ ಗಂಟೆಗೆ ಮಡಿಕೇರಿಗೆ ತಲಪುವುದರಿಂದ ಅವರ ಕಾರು ಬರುವಾಗ್ಗೆ ದಾರಿಯಲ್ಲಿ ಬಸ್ಸುಗಳ್ಯಾವುವೂ ಹೋಗಬಾರದೆಂಬುವುದೇ ಈ ವಿಶೇಷ ಹುಕುಮಿಗೆ ಕಾರಣವೆಂದು ತಿಳಿಯಬಂತು. ಇದೂ ಅಲ್ಲದೆ ಒಂದು ದಿನ ಮುಂಜೆ ಕಮಿಷನರು ಮಡಿಕೇರಿಯಿಂದ ಭಾಗಮಂಡಲ್ಕೆಕೆ ಹೋದಾಗ್ಯೂ ಇದೇ ರೀತಿಯ ಹುಕುಂ ಮಾಡಲ್ಪಟ್ಟಿತ್ತೆಂದೂ ತಿಳಿಯಲಾಯಿತು.

ಅವೆರಡು ದಿವಸಗಳಲ್ಲಿಯೇ ಜಾತ್ರೆಗೆ ಹೋಗುವ ಪ್ರಯಾಣಿಕರ ಸಂಖ್ಯೆ ಹೆಚ್ಚು. ಅಂಥಾ ದಿವಸಗಳಲ್ಲಿ ನಾಲ್ಕು ಗಂಟೆಗಳ ಕಾಲ ಬಸ್ಸುಗಳು ಹೋಗಕೂಡದೆಂದು ತಡೆ ಮಾಡಿದ್ದರಿಂದ ಪ್ರಯಾಣಿಕರಿಗೆ ಎಷ್ಟರ ಮಟ್ಟಿಗೆ ತೊಂದರೆಯಾಯಿತೆಂಬದನ್ನು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಅಲ್ಲದೆ ಬೇರೆ ಪ್ರಾಂತ್ಯಗಳ ಗವರ್ನರುಗಳಾಗಲೀ, ಇಡೀ ಇಂಡಿಯಾದ ವೈಸರಾಯರಾಗಲೀ ಹೋಗುವ ಸಲುವಾಗಿ ಬಸ್ಸುಗಳು ಹಲವು ಗಂಟೆಗಳ ವರೆಗೆ ಹೋಗಕೂಡದೆಂದು ಹುಕುಂ ಮಾಡಿದ್ದು ನಾನು ಎಂದೂ ಕೇಳಿರುವುದಿಲ್ಲ. ಯಾಕೆ, ನಮ್ಮ ಚೀಫ್ ಕಮಿಷನರವರು ಪ್ರಯಾಣ ಮಾಡುವಾಗಲೂ ಇಂಥಾ ತಡೆ ಮಾಡಿದ್ದು ನನಗೆ ಗೊತ್ತಿಲ್ಲ. ಅಂದ ಮೇಲೆ ಕೊಡಗಿನ ಪ್ರಾಮುಖ್ಯ ಜಾತ್ರೆಯ ಕಾಲದಲ್ಲಿ ಇಂಥಾ ಹುಕುಮಿಗೆ ಕಾರಣರ್ಯಾರೆಂದು ತಿಳಿಯಲು ನನಗಿರುವಂತೆಯೇ ಪಬ್ಲಿಕಿನವರಲ್ಲಿ ಹಲವರಿಗೂ ಕುತೂಹಲವಿರಬಹುದಾಗಿ ನಂಬುತ್ತೇನೆ.

'ಪ್ರಯಾಣಿಕ.'

ಕಮಿಷನರವರಿಗೊಂದು ಪತ್ರ.

ಸಂಪಾದಕರಿಗೆ,

ಸುಂಟಿಕೊಪ್ಪ ನಿವಾಸಿಗಳು ಕಮಿಷನರವರಿಗೆ ಕಳುಹಿಸಿರುವ ಪತ್ರದ ನಕಲನ್ನು ಪಬ್ಲಿಕಿನವರ ತಿಳುವಳಿಕೆ ಬಗ್ಯೆ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ವಿನಂತಿ.

ಅಯ್ಯಾ,

ಈ ಕೆಳಗೆ ರುಜು ಮಾಡಿರುವ ಸುಂಟಿಕೊಪ್ಪದ ನಿವಾಸಿಗಳು ನಮ್ಮ ಈ ಕೆಳಗಿನ ಹವಾಲುಗಳನ್ನು ನಿಮ್ಮ ಮುಂದೆ ಇಡುವವರಾಗಿದ್ದೇವೆ.

ನಿಮ್ಮ ಹುಕುಮಿನ ಮೇರೆ ನಾವು ಸುಂಟಿಕೊಪ್ಪ ಪಟ್ಟಣವನ್ನು ಬಿಟ್ಟು, ಒಂದು ಮೈಲು ದೂರದಲ್ಲಿರುವ ಗದ್ದೆ ಹಳ್ಳದಲ್ಲಿ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದೇವೆ. -ಹೀಗೆ ನಾಡುವ ಮುಂಜೆ ನಮ್ಮಲ್ಲಿ ಕೆಲವರು ನಿಮ್ಮಲ್ಲಿಗೆ ಡೆಪ್ಯುಟೇಶನ್ ಬಂದು, ಪಟ್ಟಣವನ್ನು ಬಿಟ್ಟು ಮಳೆ ಹೊಡೆಯುವಾಗ್ಯೆ ಗುಡಿಸಲುಗಳಲ್ಲಿ ವಾಸಿಸುವ ಕಷ್ಟವನ್ನು ಕುರಿತು ನಿಮಗೆ ಅರಿಕೆ ಮಾಡಿಕೊಂಡೆವು. ಆದರೆ, ಆಗ ನೀವು—ಮಳೆಗಾಲವು ಅರಿತ್ಯವಾಗಿರುವುದರಿಂದ ಮಳೆಯ ಭೀತಿಯು ನಮಗೆ ಬೇಡವೆಂದು ಹೇಳಿದಿರಿ. ಆದರೆ ದುರಾದೃಷ್ಟದಿಂದ ನಾವು ಪಟ್ಟಣ ಬಿಟ್ಟ ಎರಡು ವಾರಗಳ ನಂತರ ಮಳೆಯು ಜೆನ್ನಾಗಿ ಪ್ರಾರಂಭವಾಗಿ ಈಗ ಹತ್ತು ದಿವಸಗಳಿಂದ ಎಡೆಬಿಡದೆ ಹೊಡೆಯುತ್ತಿದೆ ಮತ್ತು ಇನ್ನೂ ಕೆಲವು ಸಮಯ ಹೊಡೆಯುವಂತೆಯೇ ಕಾಣುತ್ತದೆ. ಗುಡಿಸಲುಗಳು ಕಟ್ಟಲ್ಪಟ್ಟಿರುವ ಸ್ಥಳವು ಮಳೆಯ ದೆಸೆಯಿಂದ ಮೊಣಕಾಲು ವರೆಗೆ ನೀರು ಕೆಸರಿನಿಂದ ತುಂಬಿ, ಬಹು ಕೊಳಕ್ಕಾಗಿದೆ. ಕುಡಿಯುವ ನೀರು ಮನುಷ್ಯನ ಸೇವನೆಗೆ ಅಯೋಗ್ಯವಾಗಿದೆ ನಮಗೆ ಪಟ್ಟಣದಲ್ಲಿ ಫ್ಲೇಗಿನ ಅಪಾಯಕ್ಕಿಂತ ಈ ಹೊಸ ಸ್ಥಳದಲ್ಲಿ ಇತರ ರೋಗಗಳ ಅನಾಹುತವು ಹೆಚ್ಚಾಗಿರುವಂತೆ ಕಂಡು ಬರುತ್ತದೆ. ನಿಜ ಹೇಳುವದಾದರೆ, ಹೊಸ ಸ್ಥಳದ ಅನಾನುಕೂಲತೆಗಳನ್ನು ವಿವರಿಸಿ ನಿಮಗೆ ನಮ್ಮ ಕಷ್ಟಗಳನ್ನು ಮಂದಟ್ಟು ಮಾಡಲು ಅಸಾಧ್ಯವಾಗಿದೆ.

ಆದುದರಿಂದ ನಿಮ್ಮ ಅಮೂಲ್ಯವಾದ ಸಮಯದ ಕೆಲವು ಗಂಟೆಗಳನ್ನು ನಮ್ಮ ಕ್ಯಾಂಪನ್ನು ಸಂದರ್ಶಿಸಲು ಉಪಯೋಗಿಸಿ. ನೀವು ಖುದ್ದಾಗಿ ನೋಡಿ ನಮ್ಮ ಈಗಿನ ವಸತಿಯ ನಿಜಸ್ಥಿತಿಯನ್ನು ಅರಿತುಕೊಳ್ಳಬೇಕಾಗಿ ನಮ್ಮ ಸವಿನಯ ವಿನಂತಿಯಾಗಿದೆ. ನೀವು ಖುದ್ದಾಗಿ ಬಂದು ನೋಡಿದರೆ, ನಮ್ಮ ಈಗಿನ ವಾಸದ ಕಷ್ಟದ ಸ್ಥಿತಿಯಿಂದ ನಮ್ಮನ್ನು ಪಾರು ಮಾಡುವ ಅನಿವಾರ್ಯತೆಯು ನಿಮಗೆ ಮನವರಿಕೆಯಾಗುವದೆಂಬುದು ನಮ್ಮ ವಿಶ್ವಾಸ. ಆದುದರಿಂದ ನಮ್ಮ ಕ್ಯಾಂಪನ್ನು ಸಂದರ್ಶಿಸುವ ನಿಮ್ಮ ಕರುಣೆಗೆ ನಾವು ತುಂಬಾ ಕೃತಜ್ಞರಾಗುವೆವು.

'ಸುಂಟಿಕೊಪ್ಪದ ಪುರನಿವಾಸಿಗಳು.'

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ, ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಪಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇಧರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಸೂಣ:—ಬೆಳಿಗನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

ಕೊಡಗಿನ ಏಜಂಟರು—ಕೆ. ಶಿವಾಜಿರಾವ್ & ಬ್ರದರ್ಸ್, ಮಡಿಕೇರಿ.
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಎ. ಎನ್. ಹುಚ್ಚಯ್ಯ, ಪರ್ಚೆಂಟ್, ಗೋಣಿಕೊಪ್ಪಲು.

52—8

"ಅಪ! ನಿನಗೆ ಎಂಥ ಜಾಣ್ಣನಾದ ಅಗಸನು ಬಟ್ಟೆಯೊಗೆಯುತಿರುವನು! ನಿನ್ನ ವಸ್ತ್ರಗಳೆಲ್ಲವು ಮನಮೆಚ್ಚುವಷ್ಟು ಶುಭ್ರನಾಗಿವೆ."

"ಅಗಸನೇ? ಏನು, ನನ್ನ ಈ ವಸ್ತ್ರಗಳನ್ನೆಲ್ಲವನ್ನು ನಾನೇ 501 ಸೋಕ್ಪಿನ ಸಾಬೂನಿನಿಂದ ಒಗೆದೆನು."

ಮೆಚ್ಚಿ ಕೊಡಿನು, ವಸ್ತ್ರ ಬಾಳಿಕೆ, ಶ್ರಮ ಅತೀ ಕಡಿಮೆ!

ಟೊಮ್ಕೋ ಮೂರಾಪಧ ಮಳಿಗೆ, ನಿ (TOMCO) ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವನವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ ಲಿಮಿಟೆಡ್, ಬೊಂಬಾಯಿ ಮತ್ತು ತಾತಾಪುರ.

52—45. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಪಾಣಿ, ಸಂಕೆಸೋಜಿ, ಸೈಸೂರು.

SHIROMANI NARAYANACHARYA

Choukhamba Benares City.

THIS MAN
OUR CUSTOMER

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯೆನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತೆರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡಿ ಪ್ರವಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25 ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25 ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವದು. (ವಿನಂತಿ ಕೆಟಲಾಗಿಗೆ ಬರೆದರೆ ಇನಾಮುಗಳನ್ನು ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಪಿತ್ತಂಬರ ಕೆಟಲಾಗಿನಿಸಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—11 ಚೌಖಂಬಾ, ಬೆನಾರಿಸ್ (ಕಾಶೀ.

ಪ್ರ ಕ ಟ ಣೆ .

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನ ಕಡವು ಮದಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾ ಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿಯಬಂದಿದೆ. ಆದ್ದರಿಂದ ಮುಳ ಯೊಳದಲ್ಲಿರುವ ಪರಸಿನಕಡವು ಮದಪ್ಪುರ ದೇವಸ್ಥಾನದ ಯಾವ ಕಾಣಿಕೆ ಯೂ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪರ ಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸ ಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದಪ್ಪ ಯುಕ್ಕ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದಾರಿಗೇನೇ ಕಳು ಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ,

ಪಿ. ಯಂ. ಕುಂಞಿರಾಮನ್
ಪರಸಿನಕಡವು. [26—18] ಮೇನೇಜರ್,
25—5—'35. ಪರಸಿನಕಡವು ಮದಪ್ಪುರ ದೇವಸ್ಥಾನ.

೪೦ ವರ್ಷಗಳಿಂದ ಅನುಭವಪೆಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೫೫

ಜ್ವರದ ಗುಳಿಗೆಗಳು.

ಜಳಿಜ್ವರ. ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕೇ.
(52—5) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ.

ಡಾಕ್ಟರ್ ಮೇತ್ಯೂಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟ್‌ಆಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮೆನ ಒಪ್ಪುವಂತೆ ಕಟ್ಟುವರು. ಫ್ರೀಯಾಗಿ ಪರೀಕ್ಷಿಸಿದಲ್ಲು ತಿಳಿಯುವುದು. [52—4]

ಧಾತುಪುಷ್ಟಿ ಲೇಹ.
ಸ್ವರ್ಣ ಕಲ್ಪದ ಸಾಲಾಮಿಶ್ರ ಮಿಶ್ರಿತ.

ಇದು ಒಲಹೀನಂಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಊತ್ಪದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚು ವುದು, ಮಲಬದ್ಧತೆ, ಒಳಜ್ವರ, ಆಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿ ಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ, ಉಂಟುಮಾಡುವುದು.
ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಜಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ತಿಕ ಜ್ವರ, ಗೆಡ್ಡೆ ಒಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ, ಯಿನುಪ್ಲುಯೆಂಜಾ, ನಿಮೋನಿಯಾ ಜ್ವರ, ಕಫ ಜ್ವರ, ವಳಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿ ಯನ್ನುಂಟುಮಾಡುವದು.
ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರ ದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ.
ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿಗೂ ರಾಮಬಾಣ.

ದ್ರಾಕ್ಷ್ಯರಿಷ್ಟ—ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

ಜೀವನ ಪ್ರಾಶ್ಯ—ಡಬ್ಬಿ 1ರ 2—8—0. ಅರ್ಧಕ್ಕೆ ರೂ. 1—3—0,

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—0.

ಕೆಟಲಾಗ್ ಧರ್ಮಾರ್ಥ.)

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ನಂಬರು 1, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:- (1) ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ (ಕೊಡಗು).
(2) ಎ.ಎಸ್. ಮಂಜಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
(3) ಮೆಸರ್ಸ್ ಕಾಮತ ಎಂಡ್ ಕೊ, ತಾರಾ ಹೌಸ್ ಗಿರಿಗಾಂವ್ ಬೆಂಕ್‌ರೋಡ್, ಬೊಂಬಾಯಿ ನಂ. 4.
52—16 (4) ಮೆಸರ್ಸ್ ಮುಲ್ಲರ್ ಪೆಟೆನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

GOVERNMENT SOAP FACTORY,
Bangalore.

ವಿ ಶ್ವ ಸಾ ಹ ರ್ತ ತೆ .

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—35 ಬೆಂಗಳೂರು.

FRASER'S

FOOTWEAR
have
the HALLMARK of
distinctive finish,
upto-date style,
fine workmanship
best materials.

AMAZING VALUE FOR LOW PRICE

HARDWEAR BOOTS & SHOES,
for estate and monsoon a speciality.

G. W. FRASER & CO., CALICUT.
12—7

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೆಪ್ಪೀರ್ ಕೀಪರ್ ಖರಾರು ಫಾರಮುಗಳೂ ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು" ಲಿಮಿಟೆಡ್,
ಮಡಿಕೇರಿ.

ನೋ ಟೀ ಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಪ್ರಯಎಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮ್ಮಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಮ್ಮಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂಕಮ್ಮಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚ್ಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚರೆದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	36,650— 0—0
ಜಮೂಬಂದ ಶೇವಣಾತಿ	—	2,51,667—13—8
ವಸೂಲಾದ ಕ್ಷೇಮನಿಧಿ	—	1,02,525—10—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,
ಪಂದ್ಯಂಡ ಐ. ಬೆಳ್ಯಪ್ಪನವರು.

ಡೈರೆಕ್ಟರ್
ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—10—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಿಟರ್ಸ್—
ಕ. ಟಿ. ಡೋಂಗರೆ ಕಂಪೆನಿ,
(52—36) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

WANTED.

Influential and active persons who can guarantee business are required to work as Organisers of the Company in the areas detailed below. Applicants should be well known in the locality and must have considerable influence Previous experience in the line will be preferred.

BANGALORE	MYSORE
COORG	HASSAN
KADUR	SHIMOGA.

Also applications for agencies are solicited from important centres where the Company is not well represented The Company is very well known for its low Premiums economical management, sound investments and prompt settlement of claims. In the past 38 years it has built up an excellent position of financial strength and great popularity. It will be easy to organise and secure business for the-Company and earn a very decent and steady income.

For further particulars please apply to—

Branch Secretary,
EMPIRE OF INDIA LIFE ASSURANCE CO., LTD,
152/3, Commercial Street Bangalore.

52—51

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಗವರ್ನರಲ್ಲಿ ಇಂಡಿಯೂದಲ್ಲಿ ಸ್ಥಾಪಿಸಿದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ವಾಲಿಸಿಗಳ ಪ್ರೀಮಿಯಂ	....	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ವಾಲಿಸಿಗಳು		....	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ		....	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	....	....	ರೂ.	15,53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಅಗ್ರ	ಕಲ್ಲಿಕೋಟೆ	ಕರಾಚಿ	ಮೊರೆಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕಾಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—42

ಯು. ವಿ. ಮುತ್ತಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ತೋಟಾಗಳು, ಚೇಟಿಯಂಡಲು ಮತ್ತು ವಿಾನು ಹಿಡಿಯಲು ಅವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಆನುಭವವುಳ್ಳವರು.



ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,
329—331, Abdul Rehman Street,
BOMBAY, 3.

26—9

Printed & published by P. I. Belliappa, at "Kodagu" Press, Mercara, for "Kodagu" Ltd.